ಅರ್ಧಗಂಟೆ ಕಾಲಾವಧಿ ಚರ್ಚೆ

ಸುಳ್ಳು ಜಾತಿ ಸರ್ಟಿಫಿಕೇಟ್ ಪಡೆದು ವಿಧಾನಸಭಾ ಸದಸ್ಯರಾಗಿರುವ ಕೆಲವು ಜನರಂ ಕಬಳಿಸಂತ್ತಿರುವ ಬಗ್ಗೆ

†ಶ್ರೀ ಗೋಪಾಲ ಮುಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಈ ದಿವಸದ ಅರ್ಧ ಗಂಟೆ ಚರ್ಚೆಯಲ್ಲಿ ಪ್ರಸ್ತಾಪ ಮಾಡಬೇಕಾದ ಅತಿ ಮುಖ್ಯವಾದ ಪ್ರಶ್ನೆ ಏನೆಂದರೆ ನಾನು ಒಬ್ಬ ಹರಿಜನ ಶಾಸಕ, ನನ್ನ ಹಾಗೆ ಕರ್ನಾಟಕದಲ್ಲಿ ಎಷ್ಟು ಮಂದಿ ಹರಿಜನರಿಗೆ ಅನ್ಯಾಯವಾಗಿದೆ, ಸರ್ಕಾರ ಏನು ಮಾಡಿದೆ ಎನ್ನುವುದನ್ನು ಮೊದಲು ಹೇಳಬೇಕಾಗಿದೆ. ೧೯೮೫ ನೇ ಇಸವಿಯಲ್ಲಿ ಈ ಕರ್ನಾಟಕ ರಾಜ್ಯದಲ್ಲಿ ಸುಳ್ಳು ಜಾತಿ ಸರ್ಟಿಫಿಕೇಟ್ ಇದ್ದವರು ಎಷ್ಟು ಮಂದಿ ಎಂದು ಕೇಳಿದಾಗ ಆದಕ್ಕೆ ಮಂತ್ರಿಗಳಿಗೂ ಉತ್ತರ ಸಿಕ್ಕಲಿಲ್ಲ, ನಮಗೂ ಸಿಕ್ಕಲಿಲ್ಲ. ಮೊದಲೇ ಅದು ಸುಳ್ಳು ಜಾತಿ ಸರ್ಟಿಫಿಕೇಟ್, ಇಲ್ಲಿ ಸುಳ್ಳು ಹೇಳುತ್ತಾರೆ, ಅಲ್ಲಿ ಸುಳ್ಳು ಹೇಳುತ್ತಾರೆ. ೧೯೮೮ ರ ಮಾರ್ಚ್‌ವರೆಗೆ ಇಂತಹ ೧೧೨೬ ಪ್ರಕರಣಗಳಿವೆ ಇದರಲ್ಲಿ ಸುಳ್ಳು ಜಾತಿ ಸರ್ಟಿಫಿಕೇಟ್ ಏನು ತೆಗೆದುಕೊಂಡಿದ್ದಾರೆ ಅದರಲ್ಲಿ ೬೩೦ ಪ್ರಕರಣಗಳು ಖಾಯಂ ಆಗಿವೆ, ಈ ವಿಚಾರದಲ್ಲಿ ಹೇಳಬೇಕು ಅಂದರೆ ಸರ್ಕಾರ ಒಂದು ದೊಡ್ಡ ತಪ್ಪು ಮಾಡಿದೆ. ಈ ನಮ್ಮ ಹರಿಜನರಿಗೆ ಏನು ಮಾಡಿದೆ ಅಂದರೆ, ಮುಂದೆ ಬಾಳಿಹಣ್ಣು ಇಟ್ಟು ಹಿಂದುಗಡೆ ಕುಂತ್ತಿಗೆ ಹತ್ತಿರ ಕತ್ತಿ ಇಟ್ಟಿದೆ ಈಗ ಸರ್ಕಾರದ ಒಂದು ಅಮೆಂಡ್‌ಮೆಂಟ್ ಇದೆ, ಅದನ್ನು ಆಮೇಲೆ ಹೇಳುತ್ತೇನೆ. ಈ ಹರಿಜನ ಜಾತಿಗೆ ಯಾವ ಯಾವ ಜಾತಿಗಳು ಸೇರಿವೆ ಎನ್ನುವುದು ಎಲ್ಲರೂ ಕೇಳುವಂಥ ವಿಚಾರ. ಏಕೆಂದರೆ ೧೫ ಪರ್ಸೆಂಟ್‌ವರೆಗೆ ಅವಕಾಶ ಸಿಗುತ್ತದೆ ಅಂದರೆ, ನಿಜವಾಗಿ ಹರಿಜನರ ಜಾತಿಗೆ ಸೇರಿದ ಯಾವ ಯಾವ ಜಾತಿಗಳಿವೆ. ಎಷ್ಟು ಮತಗಳಿವೆ ಅಂದರೆ ಇನ್ನು ಸ್ವಲ್ಪ ದಿವಸ ಹೋದರೆ ಬ್ರಾಹ್ಮಣರು ನಮಗೆ ಹೆಣ್ಣು ಕೊಡಬೇಕು, ಒಕ್ಕಲಿಗರು ನಮಗೆ ಗಂಡು ಕೊಡಬೇಕು. ಈ ರೀತಿ ನಮಗೆ ಹೆಣ್ಣು ಗಂಡು ಕೊಡುವಂಥ ಕರ್ನಾಟಕದ ತುಂಬ ಹರಿಜನರಾಗಿದ್ದಾರೆ. ಪಾಕಿಸ್ತಾನ ಹೇಗೆ ಮುಸ್ಲಿಂ ರಾಜ್ಯ ಆಗಿದೆಯೋ ಹಾಗೆ ಕರ್ನಾಟಕ ಹರಿಜನರ ರಾಜ್ಯ ಆಗಲಿಕ್ಕೆ ಇದು ಒಂದು ಉದಾಹರಣೆ.

ಹೆಸರು ಚಂದ್ರಶೇಖರ್ ಕೆ. ಅಂತ, ಇವನು ಬ್ರಾಹ್ಮಣ, ಈಗ ಹರಿಜನ ಜಾತಿಗೆ ಸೇರಿದ್ದಾನೆ, ಕ್ರಿಶ್ಚಿಯನ್ ಜಾತಿಯವರು ಕೂಡ ಹರಿಜನರ ಜಾತಿಗೆ ಸೇರಿದವರಾಗಿದ್ದಾರೆ. ಹಾಸನದ ಬ್ರಾಹ್ಮಣ ರಾಜಗೋಪಾಲ್ ಹೆಬ್ಬಾರ್ ಎನ್ನುವವರು, ಇವರೂ ಕೂಡ ಹರಿಜನರ ಜಾತಿಗೆ ಸೇರಿದವರು ಎಸ್. ಬಿ. ಹಿರೇಮಠ, ಲಿಂಗಾಯಿತರು. ಇವರೂ ಕೂಡ ಪರಿಶಿಷ್ಟ ಜಾತಿಗೆ ಸೇರಿದವರು. ಇವರು ಗಳು ಗುಮಾಸ್ತರು ಇಲ್ಲವೇ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಶ್ರೀಮತಿ ಆರುಣ, ಈಡಿಗ ನಾಯ್ಡು, ಇವರೂ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರು. ಇನ್ನು ಲಿಂಗಾಯಿತರು ಪರಿಶಿಷ್ಟ ಜಾತಿಯವರು, ಇವರೂ ಹರಿಜನ ಜಾತಿಗೆ ಸೇರಿದವರು. ಒಕ್ಕಲಿಗರು, ಎಂ. ಮುನಿಕೃಷ್ಣಪ್ಪ ಎನ್ನುವವರು ಇವರೂ ಕೂಡ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರು. ರಾಣಿಬೆನ್ನೂರಿನಲ್ಲಿರತಕ್ಕ ಬೆಸ್ತರು ಇವರೂ ಕೂಡ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರು. ವಿಶ್ವಕರ್ಮ, ಇವರೂ ಕೂಡಾ ಹರಿಜನ ಜಾತಿಗೆ ಸೇರಿದವರು. ಕ್ರಿಶ್ಚಿಯನರೊಬ್ಬರು ಹರಿಜನ ಜಾತಿಗೆ ಸೇರಿದ್ದಾರೆ ಕಲಾವಿಧರು. ಇವರೂ ಹರಿಜನ ಜಾತಿಗೆ ಸೇರಿದ್ದಾರೆ. ಶಿವಪ್ಪ, ಕುರುಬ ಲಿಂಗಾಯಿತ, ಇವರೂ ಹರಿಜನ ಜಾತಿಗೆ ಸೇರಿದ್ದಾರೆ. ಕುಮಾರಸ್ವಾಮಿ, ಲಿಂಗಾಯಿತರು, ಇವರೂ ಹರಿಜನ ಜಾತಿಗೆ ಸೇರಿದ್ದಾರೆ. ವೀರಶೈವ ಇವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ. ಒಕ್ಕಲಿಗರೊಬ್ಬರು ಹರಿಜನ ಜಾತಿಗೆ ಸೇರಿದ್ದಾರೆ. ಕೋಟೇಶ್ವರರು ಹರಿಜನ ಜಾತಿಗೆ ಸೇರಿದ್ದಾರೆ. ಶ್ರೀಮತಿ ಸರಸ್ವತಿ ಗುಂಡಪ್ಪ, ಇವರು ಕ್ರಿಶ್ಚಿಯನ್ ಇವರೂ ಕೂಡ ಹರಿಜನರ ಜಾತಿಗೆ ಸೇರಿದ್ದಾರೆ ಹೆಚ್. ಎನ್. ನಟರಾಜ್, ಲಿಂಗಾಯಿತರು. ಹರಿಜನ ಜಾತಿಗೆ ಸೇರಿದ್ದಾರೆ. ಆರ್. ಚಂದ್ರಕೋಟೆ, ಇವರೂ ಹರಿಜನ ಜಾತಿಗೆ ಸೇರಿದ್ದಾರೆ, ಪರಮೇಶ್ವರ್ ತಾಯಿನಾಡು, ಇವರು ಬ್ರಾಹ್ಮಣರು, ಇವರೂ ಕೂಡ ಹರಿಜನ ಜಾತಿಗೆ ಸೇರಿದ್ದಾರೆ. ಗೀತಾ ಕುಲಕರ್ಣಿ, ಲಿಂಗಾಯಿತರು, ಇವರೂ ಕೂಡ ಹರಿಜನ ಜಾತಿಗೆ ಸೇರಿದ್ದಾರೆ. ಇನ್ನೊಬ್ಬರು ಪ್ರಭುದೇವ್ ಎನ್ನತಕ್ಕವರು, ಇವರು ಗುಲ್ಬರ್ಗಾ ಜಿಲ್ಲಾ ಪರಿಷತ್ತಿನ ಸದಸ್ಯರಂ. ಇವರೂ ಕೂಡ ಹರಿಜನ ಜಾತಿಗೆ ಸೇರಿದ್ದಾರೆ.

ಮಾನ್ಯ ಅಧ್ಯಕ್ಷರೆ, ಈ ಹರಿಜನ ಜಾತಿಗೆ ಸೇರಿದವರ ವಿರುದ್ಧ ಸರ್ಕಾರ ಏತಕ್ಕೆ ಕ್ರಮ ತೆಗೆದು ಕೊಳ್ಳಲಿಲ್ಲವೆಂದು ನಾವು ಕೇಳಿದಾಗ ನಾವು ಇದನ್ನು ಸಿ.ಆರ್.ಸೆಲ್‌ಗೆ ಕಳುಹಿಸಿದ್ದೇವೆ. ಆಕಡೆ ಕಳುಹಿಸಿದ್ದೇವೆ, ಈಕಡೆ ಕಳುಹಿಸಿದ್ದೇವೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಹೇಳಿದ್ದಾರೆ. ಇದರಲ್ಲಿ ಎಸ್‌ಡಬ್ಲ್ಯೂಎಲ್/೧೦೪/ಎಸ್‌ಎಬಿ ೮೧, ತಾ : ೧೬-೧೦-೧೯೮೪, ಅನಂತರ ತಾ : ೨೮-೧೧-೧೯೮೪ ರಲ್ಲಿ ಸರ್ಕಾರ ಇನ್ನೊಂದು ಆದೇಶವನ್ನು ಕಳುಹಿಸಿದೆ. ಬೇಡ, ನಾಯಂಕ, ನಾಯಿಕ, ವಾಲ್ಮೀಕಿ, ವರಾವ, ತಳವಾರ, ಈ ಪಂಗಡದವರಿಗೆ ಪರಿಶಿಷ್ಟ ಬುಡಕಟ್ಟು ಜನರಿಗೆ ದೊರೆಯುವ ಮಾಸಲಾತಿಯನ್ನು ಒದಗಿಸಬೇಕೆಂದು ಆದೇಶ ಕಳುಹಿಸಿದೆ. ಸರ್ಕಾರದವರು ಒಂದು ಆಜ್ಞೆಯನ್ನು ೮೪ನೇ ಇಸವಿಯಲ್ಲಿ ಮಾಡಿದರು. ಅನಂತರ ಇದೇರೀತಿ ಮಂತ್ರೊಂದು ಆದೇಶವನ್ನು ತಾ : ೨೩-೧-೧೯೮೬ರಲ್ಲಿ ಕೂಡ ಹೊರಡಿಸಿ ಇದೇರೀತಿ ಮಾಡಿದ್ದಾರೆ. ಪರಿಶಿಷ್ಟ ಬುಡಕಟ್ಟು ಜನರಿಗೆ ದೊರೆಯುವ ಸೌಲಭ್ಯಗಳನ್ನು ಈ ಕೆಳಕಂಡವರಿಗೆ ನಾಯಿಕ, ನಾಯಕ, ಬೇಡ, ವಾಲ್ಮೀಕಿ, ಪರಿವಾರ, ತಳವಾರ, ಮಾಲೇರು, ಕುರುಬರು.....

ಶ್ರೀ ಬಿ. ಆರ್. ನೀಲಕಂಠಪ್ಪ.—ಬಹುಶಃ ಅವರು ಮತಾಂತರ ಆಗಿದ್ದರೆ ಅವರು ಮತಾಂತರ ಆಗಿರತಕ್ಕ ಸರ್ಟಿಫಿಕೇಟ್ ಹಾಕಿರಬಹುದು.

ಶ್ರೀ ಗೋಪಾಲ ಮಂಕಂದ ಕಾನಡೆ.—ನೀವೂ ನಮ್ಮ ಜಾತಿಗೆ ಬಂದಂಬಿಡಿ, ನಮ್ಮ ಜನರನ್ನು ನಿಮಗೆ ಕೊಡುತ್ತೇವೆ, ನಿಮ್ಮ ಜನರನ್ನು ನಮಗೆ ಕೊಡಿ. ನೀವು ಡಿಕ್ಲೇರ್ ಮಾಡಿ. ಹರಿಜನರು ದಿಕ್ಕಿಲ್ಲದವರು ಆಗಲಿ. ಎಲ್ಲರೂ ಹರಿಜನರಾಗುತ್ತಾರೆ. ಆರೀತಿ ಡಿಕ್ಲೇರ್ ಮಾಡಿದರೆ ನಮ್ಮಿದೇನೂ ಅಬ್ಜೆಕ್ಷನ್ ಇಲ್ಲ.

ಮಾನ್ಯ ಅಧ್ಯಕ್ಷರೆ, ಈ ಜನರಿಗೆ ಯಾರು ಸರ್ಟಿಫಿಕೇಟ್‌ಗಳನ್ನು ಕೊಟ್ಟರು ? ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಒಂದುಕಡೆ ಇವರಿಗೆ ಶಿಕ್ಷೆ ಮಾಡಿ, ಏನ್‌ಕ್ವೈರಿ ಮಾಡಿ ಎಂದರೆ ಹೇಳುತ್ತೀರಿ, ಆದರೆ ಇನ್ನೊಂದುಕಡೆ ಇವರನ್ನು ಏನೂ ಮಾಟ್ಟಬೇಡಿ, ಇವರಿಗೆ ಸಿಕ್ಕಬೇಕಾದ ಎಲ್ಲ ಸವಲತ್ತುಗಳನ್ನೂ ಕೊಡಿ ಎಂದು ಹೇಳುತ್ತೀರಿ. ಇದು ಹರಿಜನರಿಗೆ ದ್ರೋಹ ಮಾಡಿದಂತಾಗುವುದಿಲ್ಲವೇ ? ಇಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳದೆ ಅವರನ್ನು ಸಸ್ಪೆಂಡ್ ಮಾಡದೇ, ಡಿಸ್‌ಮಿಸ್ ಮಾಡದೇ ಇನ್ನೂ ಮುಂದುವರಿಸುತ್ತಿದ್ದೀರಲ್ಲಾ ಏತಕ್ಕೆ ? ನಮ್ಮ ಹರಿಜನರಿಗೆ ಸಿಕ್ಕತಕ್ಕ ಎಲ್ಲ ಸೌಲಭ್ಯಗಳನ್ನೂ ಇವರು ಪಡೆದಿದ್ದಾರೆ. ಇನ್ನೂ ಇಂತಹವರು ಸುಮಾರು ೪ ಸಾವಿರ ಜಿಲ್ಲೆರೆ ಇದ್ದಾರೆ. ೮೪ನೇ ಇಸವಿಯಲ್ಲಿ ಏನು ಹೇಳಿದರೆಂದರೆ, ೮೪ನೇ ಇಸವಿಗಿಂತ ಮುಂಚಿತವಾಗಿ ಯಾರಿದ್ದಾರೆ ಅವರನ್ನು ಹಾಗೇ ಇಡಿ, ನಾವು ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆ, ಅಲ್ಲಿಂದ ಪರ್ಮಿಷನ್ ತೆಗೆದು ಕೊಂಡು ಬರುತ್ತೇವೆ, ಅನಂತರ ನೋಡೋಣ ಎಂದು ಹೇಳಿದರು.

ಅಧ್ಯಕ್ಷರೇ, ನಮಗೆ ಸಿಕ್ಕತಕ್ಕಂಥ ಸವಲತ್ತು, ನಮ್ಮ ಹಕ್ಕು, ನಮ್ಮ ರಕ್ಷಣೆಗೋಸ್ಕರ ಮೀಸಲಿಟ್ಟಿದ್ದ ಹಣವನ್ನು ಬೇರೆಯವರ ರಕ್ಷಣೆಗೆ ಸೇರಿಸಂತ್ತೇವೆಂದರೆ ಏನು ಅರ್ಥ. ಕೇಂದ್ರದವರ ಮಟ್ಟಕ್ಕೆ ಕಳುಹಿಸುವುದಕ್ಕೆ ಆಗತ್ಯವಿನಿತ್ತು ಅಲ್ಲೇ ಮಾಡಬಹುದಿತ್ತಲ್ಲ. ಡಿಸ್‌ಕಷನ್‌ಗೆ ತೆಗೆದುಕೊಳ್ಳ ಬಹುದಿತ್ತಲ್ಲ. ಅವರಿಗೆ ಅನ್ಯಾಯವಾಗಿದೆ ಎಂದು ಪ್ರತಿಭಟಿಸುತ್ತಾರೆ, ಅವರಿಗೆ ಅನ್ಯಾಯವಾಗಿದೆ ಎಂದು ಸುಳ್ಳು ಜಾತಿ ಸರ್ಟಿಫಿಕೇಟ್ ತಂದಿರುವವರನ್ನು ಗುರುತಿಸಲಿಲ್ಲ. ೧೯೮೬ನೇ ಇಸವಿಯಲ್ಲಿ ಎರಡು ಆರ್ಡರ್‌ಗಳನ್ನು ಮಾಡಿದ್ದಾರೆ. ಅದರಲ್ಲೂ ಹೀಗೆಯೇ ಆವರನ್ನೇ ತೋರಿಸಿದ್ದಾರೆ. ಅವರಿಗೆ ಏನೇನು ಸವಲತ್ತುಗಳಿವೆ ಅವೆಲ್ಲವನ್ನು ಕೊಡುತ್ತೇವೆಂದು ಹೇಳಿದರು. ಹಾಗಾದರೆ ಹರಿಜನರು ಎಂದರೆ ಬೆಲೆ ಎಲ್ಲಿದೆ. ? ನಮಗೆ ಹಿಂದೆ ಚರ್ಮ ಕೊಯ್ದರು, ಇವರು ಹೆಣ ಕಾಯುವುದಕ್ಕೆ ಹರಿಜನರು ಬೇಕು, ಮಲವನ್ನು ಹೊರುವುದಕ್ಕೆ ಹರಿಜನರು ಬೇಕು, ಪ್ರತಿಯೊಂದಕ್ಕೂ ಹರಿಜನರು ಬೇಕು, ಆದರೆ ಹರಿಜನರಿಗೆ ಸಿಗತಕ್ಕಂಥ ಸವಲತ್ತುಗಳನ್ನು ಮೇಲಿನ ವರ್ಗದವರು ತೆಗೆದುಕೊಳ್ಳಬೇಕು, ಹೀಗೆ ಸವಲತ್ತುಗಳನ್ನು ತೆಗೆದುಕೊಂಡಿರುವವರಿಂದ ವಾಪಸ್ ತೆಗೆದುಕೊಂಡು ನಮ್ಮ ಹರಿಜನರಿಗೆ ಕೊಡುತ್ತೀರಾ ? ಅವರಿಗೆ ಸಪ್ಲೋರ್ಟ್ ಸರ್ಕಾರ ಏತಕ್ಕೆ ಮಾಡಬೇಕು. ಹರಿಜನರಿಗೆ ಒಳ್ಳೆಯದನ್ನು ಮಾಡುತ್ತೇವೆಂದು ಹೇಳಿ, ಎಲ್ಲಿ ನೋಡಿದರು ಮಾಸಲಾತಿ ಪ್ರಕಾರ ಎಂದು ಹೇಳಿದರೂ ಮಾಸಲಾತಿ ಎಲ್ಲೂ ಸರಿಯಾಗಿ ಇಲ್ಲ. ಯಾವುದರಲ್ಲಿ ನೋಡಿದರೂ ಮೂರು ಮೂರು ತಿಂಗಳಲ್ಲಿ ಒಬ್ಬೊಬ್ಬ ಅಧಿಕಾರಿ ಒಂದೊಂದು ತರಹದ ಆರ್ಡರ್ ಮಾಡುತ್ತಿದ್ದಾರೆ. ಈಗ ಕಾರವಾರದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಒಬ್ಬರು ಇದ್ದಾರೆ. ಅವರ ಒಬ್ಬರ ಸಲುವಾಗಿ ಪ್ರತಿಯೊಂದು

ಮಾಸಲಾತಿಯಲ್ಲಿಯೂ ಕೂಡ ಅನ್ಯಾಯ ಮಾಡುತ್ತಿದ್ದಾರೆ. ಸುಳ್ಳು ಜಾತಿ ಸರ್ಟಿಫಿಕೇಟ್ ಕೊಟ್ಟು ಅನ್ಯಾಯ ಮಾಡುತ್ತಿದ್ದಾರೆ. ಪ್ರತಿಯೊಂದು ವರ್ಗದಲ್ಲೂ ಅನ್ಯಾಯ ಮಾಡುತ್ತಿದ್ದಾರೆ. ಎಲ್ಲಾ ವರ್ಗದವರು ಅಂದರೆ ಜಾತಿಭೆ ಧದಲ್ಲಿ ಎಲ್ಲರೂ ಒಂದೇ. ಆದರೆ ನಮಗೆ ಏನಾಗಿದೆ, ನಮ್ಮ ವರ್ಗದವರಿಗೆ ಏನಾದರೂ ಸವಲತ್ತುಗಳನ್ನು ಕೊಟ್ಟಿದ್ದರೆ ಅದಕ್ಕೆ ಮಾತ್ರ ಬರುತ್ತಾರೆ. ಆದರೆ ನಮ್ಮನ್ನು ಮುಂಟ್ಟಿದರೆ ಸಗಣಿ ನೀರನ್ನು ಹಾಕಿಕೊಳ್ಳುತ್ತಾರೆ. ನಮಗೆ ಪ್ರತೇಕವಾಗಿ ನೀರು ಕೊಡುತ್ತಾರೆ. ಈವತ್ತು ಈ ವರ್ಗದ ಜನರಿಗೆ ಅನ್ಯಾಯವಾಗಿದೆಯಲ್ಲ ಅದರ ಬಗ್ಗೆ ಸರ್ಕಾರದವರ ಕ್ರಮವೇನು ? ಕೊಟ್ಟ ಸ್ಟೇಯನ್ನು ವಿತ್‌ಡ್ರಾ ಮಾಡಿಕೊಳ್ಳುತ್ತಾರೋ ಇಲ್ಲವೋ ? ಅಥವಾ ಎಲ್ಲರನ್ನೂ ಪರಿಜನರ ಜಾತಿಗೆ ಸೇರಿಸಬೇಕೆಂಬ ತೀರ್ಮಾನವಿದ್ದರೆ ಅಸೆಂಬ್ಲಿಯಲ್ಲಿ ಒಂದು ನಿರ್ಣಯ ಆಗಲಿ. ಹರಿಜನರ ಜಾತಿಗೆ ಎಲ್ಲರೂ ಸೇರೋಣ. ನನಗೆ ಬೇಕಾಗಿರುವುದೇನೆಂದರೆ ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡು ಏನಂ ಹರಿಜನ ಜಾತಿಗೆ ಸೇರುತ್ತಿದ್ದಾರೆ, ೧೯೬೬ರ ಅನಂತರ ಯಾರು ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡಿರುತ್ತಾರೆ ಅವರ ಬಗ್ಗೆ ಕ್ರಮ ತೆಗದುಕೊಳ್ಳುವುದಕ್ಕೆ ಏನೂ ಕಾನೂನು ಇಲ್ಲ. ಏತಕ್ಕೆಂದರೆ ಗವರ್ನಮೆಂಟ್ ಆರೀತಿ ಆರ್ಡರ್ ಮಾಡಿದೆ.

ಒಂದು ಕಡೆ ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ, ಇನ್ನೊಂದು ಕಡೆ ಹರಿಜನರ ಕುತ್ತಿಗೆ ಹಿಡಿಯುತ್ತಿರುವಂಥ ಆರ್ಡರ್ ಮಾಡುತ್ತಾರೆ. ಆದ್ದರಿಂದ ೫೦ ಇಲ್ಲವೇ ಒಂದು ಸಾವಿರ ಚಿಲ್ಲರೆ ಜನರಿಗೆ ನೀವು ಕೊಟ್ಟ ಸ್ಟೇ ಆರ್ಡರ್‌ನ್ನು ವಾಪಸ್ ತೆಗೆದುಕೊಳ್ಳುತ್ತೀರಾ? ಅವರು ಇದುವರೆಗೆ ಮನೆ ಸೈಟು ಬೆನಿಫಿಟ್ ಏನು ತೆಗೆದುಕೊಂಡಿರುತ್ತಾರೆ, ಅದೆಲ್ಲವನ್ನು ಅವರಿಂದ ಪೂರ್ತಿಯಾಗಿ ವಸೂಲು ಮಾಡಿ ಹರಿಜನರಿಗೆ ಮುಂಟ್ಟಿಸಬೇಕು ಎನ್ನುವುದು ಒಂದು ಸುಳ್ಳು ಸರ್ಟಿಫಿಕೇಟ್ ಕೇಂದ್ರ ಸರ್ಕಾರದವರು ಕೊಟ್ಟಿಲ್ಲ.xx ಕರ್ನಾಟಕದಲ್ಲಿ ಕೊಟ್ಟಿದ್ದಾರೆ ಅದನ್ನು ಇಲ್ಲಿ ತಂದುಕೊಟ್ಟು ಹರಿಜನರಿಗೆ ಸಿಕ್ಕಬೇಕಾದಂಥ ಸವಲತ್ತನ್ನು..... ಹೊಟ್ಟೆ ಉರಿದು ಹೋಗುತ್ತದೆ. ಇಂತಹ ತಹಸೀಲ್‌ದಾರರನ್ನು ಅಧಿಕಾರದಿಂದಕೆಳಗೆ ಇಳಿಸಿ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಸರ್ಕಾರದವರು ಅಂಧವರಿಗೆ ಸಪೋರ್ಟ್ ಮಾಡುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಸುಳ್ಳು ಸರ್ಟಿಫಿಕೇಟ್ ಕೊಟ್ಟು.....

(ಗೊಂದಲ)

ಅಧ್ಯಕ್ಷರು.— ಮಾನ್ಯ ಕಾನಡೆಯವರೇ ಸ್ವಲ್ಪ ಶಾಂತಿಯಿಂದ, ಸಮಾಧಾನದಿಂದ ಸರಿಯಾಗಿ ಮಾತನಾಡಬೇಕು. ನಾನು ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ.

(ಗೊಂದಲ)

ಕೇಳ್ರಿ ನಾಯಕರೆ... ಏನಿದು ನಿಮಗೆ ಸರ್ಕಾರದಿಂದ ಸರಿಯಾದ ಉತ್ತರ ಬೇಕಾಗಿಲ್ಲವೆಂದು ಕಾಣುತ್ತದೆ ನಿಮಂಗೆ ಜಗಳ ತೆಗೆಯುವುದೇ ಕೆಲಸವಾಗಿದೆ.

ಶ್ರೀ ಆರ್. ಎನ್. ನಾಯಕ್.— ಅವರು ಏತಕ್ಕೆ ಇಂಟರ್‌ಫೀಯರ್ ಆದರು.

ಅಧ್ಯಕ್ಷರು.— ಮಾನ್ಯ ನಾಯಕರೆ ಸ್ವಲ್ಪ ಸಮಾಧಾನವಾಗಿ ಮಾತನಾಡಿ.xx ಪದವನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಸರ್ಟಿಫಿಕೇಟ್ ಯಾವಾಗ ಕೊಟ್ಟರು. ಯಾರು ಕೊಟ್ಟರು ? ಏತಕ್ಕಾಗಿ ಕೊಟ್ಟರು? ಇದನ್ನೆಲ್ಲಾ ನೋಡಿಕೊಂಡು ಸರ್ಕಾರ ಏತಕ್ಕೆ ಕಣ್ಣು ಮುಚ್ಚಿ ಕೊಂಡಿರುತ್ತದೆ ? ನಮಗೆ ಬೇಕಾಗಿರುವುದೇನೆಂದರೆ ಸರ್ಕಾರ ಏನು ತಡೆ ಆಜ್ಞೆಯನ್ನು ಕೊಟ್ಟಿದೆ ಆ ತಡೆಯಾಜ್ಞೆಯನ್ನು ವಾಪಸ್ ತೆಗೆದುಕೊಳ್ಳಬೇಕು. ಹರಿಜನರಿಗೆ ಅನ್ಯಾಯವಾಗಿರುವುದನ್ನು ಸಂಪಡಸ ಬೇಕು. ನಾಲ್ಕು ಮಂದಿಗೆ ಮೇಲೆ ಕ್ರಮ ತೆಗೆದುಕೊಂಡಿಂ ಡಿಸ್‌ಮಿಸ್ ಮಾಡಿದ್ದಾರೆ. ನಾಲ್ಕು ಮಂದಿಯ ಹೆಸರು ಪ್ರಕಟಣೆಯಾಗಿದೆ, ಅದರ ಬಗ್ಗೆ ಏನು ಮಾಡುತ್ತೀರೆಂಬುದನ್ನು ತಾವು ಹೇಳ ಬೇಕು ?

---

xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಶೆ-೦೦. ಪಿ. ಯಂ.

ಶ್ರೀ ಆರ್. ಎನ್. ನಾಯಕ್.— ನಾನು ಮಾತನಾಡಬೇಕು.

ಅಧ್ಯಕ್ಷರು.— ಮಂತ್ರಿಗಳು ಉತ್ತರ ಹೇಳಲಿ, ಆಮೇಲೆ ಕೇಳುವಿರಂತೆ. According to the rules of procedure and conduct of business, any member who has previously intimated to the Speaker may be permitted to ask questions for the purpose of further elucidating any matter of fact. So I have permitted both of you.

ಶ್ರೀ ಜಿ. ಎಂ. ಕಾನಡೆ.— ಹರಿಜನರ ಸಂರಕ್ಷಣೆಗಾಗಿ ೧೯೭೬ರಲ್ಲಿ ಒಂದು ಕಮಿಟಿ ಮಾಡಿದರು. ಆ ಕಮಿಟಿಯಲ್ಲಿ ಶ್ರೀಯುತರುಗಳಾದ ವಿ. ಎಲ್. ಪಾಟೀಲ್, ಎಂ. ರಘುಪತಿ, ಸಿದ್ಧರಾಮಯ್ಯ, ವೀರಣ್ಣ, ಮಲ್ಲಿಕಾರ್ಜುನ ಖಿರ್ಗೆ, ಬೊಮ್ಮಾಯಿ, ವೀರಪ್ಪ ಮೊಯಿಲಿ ಇವರುಗಳು ಮತ್ತು ಒಬ್ಬರು ಅಧಿಕಾರಿ ಇದ್ದಾರೆ. ಆ ಕಮಿಟಿ ಈಗ ಏನಾಯಿತು ? ಅದು ಎಷ್ಟು ಸಾರಿ ಮೀಟಿಂಗ್ ಕರೆಯಿತು ? ಅದಕ್ಕೆ ಎಷ್ಟು ದುಡ್ಡು ಖರ್ಚಾಯಿತು ? ಸರ್ಕಾರಕ್ಕೆ ಆ ಕಮಿಟಿಯಿಂದ ಏನು ವರದಿ ಬಂದಿದೆ ? ಇದನ್ನೆಲ್ಲಾ ತಾವು ಹೇಳಬೇಕು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಇಲಾಖೆ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನಡೆಯವರು ಅತಿ ಮುಖ್ಯವಾದ ವಿಷಯವನ್ನು ಅರ್ಧ ಗಂಟೆ ಕಾಲದ ಚರ್ಚೆಯ ಮುಖಾಂತರ ಸಭೆಯ ಗಮನವನ್ನು ಸೆಳೆದಿದ್ದಾರೆ. ಹಾಗೂ ಕೆಲವು ವಿಷಯಗಳ ಬಗ್ಗೆ ಈ ಮನೆಯಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ, ಒಂದು ಸಮಾಜಕ್ಕೆ ಒಂದು ಜಾತಿಗೆ ಅನ್ಯಾಯವಾದರೆ ಅದನ್ನು ಪ್ರತಿಭಟಿಸುವುದಕ್ಕೆ, ಅದನ್ನು ಹೇಳುವುದಕ್ಕೆ ರೀತಿ ನೀತಿ ಇದೆ, ವಿಧಿ ವಿಧಾನ ಇದೆ. ಆದರೆ ತಹಶೀಲ್ದಾರರ ಬಗ್ಗೆ ಮಾನ್ಯ ಸದಸ್ಯರು ಹೇಳಿದ ಮಾತು ಸರಿಯಲ್ಲ. ತಾವು ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆಂದು ಹೇಳಿದ್ದೀರಿ, ಸಂತೋಷ. ಹರಿಜನರ ಲಿಸ್ಟ್‌ನಲ್ಲಿ ಅನೇಕ ಜಾತಿಗಳು ಸೇರಿವೆ ಎಂಬ ಮಾತನ್ನು ಕಾನಡೆಯವರು ಹೇಳಿದರು. ಸಂವಿಧಾನದ ೩೪ರಿನೇ ಆರ್ಟಿಕಲ್‌ನಲ್ಲಿ ಲಿಸ್ಟ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಮಾಡಿದ್ದಾರೆ, ೩೪ರಿನೇ ಆರ್ಟಿಕಲ್‌ನಲ್ಲಿ ಲಿಸ್ಟ್ ಆಫ್ ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಮಾಡಿದ್ದಾರೆ. ಆ ಲಿಸ್ಟನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ಇದರಲ್ಲಿ ಏನಾದರೂ ಬದಲಾವಣೆ ಮಾಡಬೇಕಾದರೆ ಅದು ಪಾರ್ಲಿಮೆಂಟ್ ಮುಂದೆ ಬಂದು ಚರ್ಚೆಯಾಗಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆದುಕೊಂಡ ಮೇಲೆ ಬದಲಾವಣೆ ಆಗಬೇಕಾಗುತ್ತದೆ. ಈ ಲಿಸ್ಟನ್ನು ಮಾಡಬೇಕಾದರೆ ಬಹಳ ಜಾಗರೂಕತೆಯಿಂದ ಮಾಡಿದ್ದಾರೆ. ಪರಿಶಿಷ್ಟ ಜಾತಿಗೆ ಯಾವ ಕ್ರೈಟೀರಿಯಾ ಇರಬೇಕು, ಪರಿಶಿಷ್ಟ ವರ್ಗಕ್ಕೆ ಯಾವ ಕ್ರೈಟೀರಿಯಾ ಇರಬೇಕೆಂ ಎಂಬ ಬಗ್ಗೆ ಒಂದೆಂ ಲಿಸ್ಟ್ ಮಾಡಿದ್ದಾರೆಂದೆಂ ಈ ಸಭೆಯೆಂ ಮೂಲಕ ಮಾನ್ಯ ಕಾನಡೆಯವರಿಗೆ ಹೇಳಬಯಸುತ್ತೇನೆ. ಸಂವಿಧಾನದ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಒದಗಿಸಲಾದ ಸೌಲಭ್ಯಗಳು ದುರುಪಯೋಗವಾಗಬಾರದು, ಅವರ ಹಿತರಕ್ಷಣೆ ಆಗಬೇಕೆಂಬ ಸಲುವಾಗಿ ನಾಗರೀಕ ಸಂರಕ್ಷಣಾ ಕಾಯಿದೆ ೧೯೭೫ರಲ್ಲಿ ಜಾರಿಗೆ ಬಂದಿದೆ. ಈ ಒಂದು ಕಾಯಿದೆಯನ್ನು ಜಾರಿಗೆ ತರುವುದಕ್ಕೋಸ್ಕರ ನಾಗರೀಕ ಸಂರಕ್ಷಣಾ ಘಟಕವನ್ನು ೧೯೭೫ ರಲ್ಲಿ ಸರ್ಕಾರ ಸ್ಥಾಪಿಸಿದೆ. ರಾಜ್ಯ ಮಟ್ಟದಲ್ಲಿ ಡಿ. ಐ. ಜಿ ಅವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಡಿವಿಜನ್ ಮಟ್ಟದಲ್ಲಿ ೪ ಘಟಕಗಳು ಡಿ.ವೈ ಎಸ್.ಪಿ. ಅವರ ನೇತೃತ್ವದಲ್ಲಿ ಕೆಲಸ ಮಾಡುತ್ತಿವೆ. ಈ ಘಟಕಗಳ ಪ್ರಮುಖ ಉದ್ದೇಶ ಎಲ್ಲಿ ಅಸ್ಪೃಶ್ಯತೆ ಇದೆ, ಎಲ್ಲಿ ಹರಿಜನರ ಮೇಲೆ ದೌರ್ಜನ್ಯ ನಡೆಯುತ್ತದೆ, ಎಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಹೆಸರಿನಲ್ಲಿ ದುರ್ಲಾಭ ಪಡೆಯಲಾಗುತ್ತಿರೆ ಅಂಥವರ ಬಗ್ಗೆ ತನಿಖೆ ಮಾಡುವುದಕ್ಕೆ ಕೆಲಸ ಮಾಡುತ್ತವೆ. ಕಾನಡೆಯವರು ಈ ಬಗ್ಗೆ ಬಹಳ ಆಪಾದನೆ ಮಾಡಿದ್ದಾರೆ. ಸುಳ್ಳು ಜಾತಿ ಪತ್ರದ ಪ್ರಕರಣಗಳು ೧೯೮೨ ರಿಂದ ಎಷ್ಟಿವೆ ಎಂಬುದನ್ನು ಸಭೆಯ ಗಮನಕ್ಕೆ ತರಲಿಚ್ಚಿಸುತ್ತೇನೆ. ೧೯೮೨ ರಿಂದ ೧೯೮೫ರವರೆಗೆ ಸುಳ್ಳು ದಾಖಲೆ ಪತ್ರಗಳ ಬಗ್ಗೆ ಪೊಲೀಸ್ ಕೇಸ್ ರಿಜಿಸ್ಟರ್ ಮಾಡುತ್ತಿದ್ದರು. ೧೯೮೫ ರಿಂದ ಪಿ. ಆರ್. ಇ. ಸೆಲ್ಲಿಗೆ ಈ ಅಧಿಕಾರವನ್ನು ಕೊಟ್ಟಿದ್ದೇವೆ. ೧೯೮೫ ರಿಂದ ನಾಗರೀಕ ಸಂರಕ್ಷಣಾ ಘಟಕ ಕೆಲಸ ಮಾಡುತ್ತಿದೆ. ೧೯೮೫ ರಿಂದ ಸುಳ್ಳು ಜಾತಿ ಪ್ರಮಾಣ ಪತ್ರಗಳ ಬಗ್ಗೆ ತನಿಖೆ ಮಾಡಲು ಪಿ. ಆರ್. ಇ. ಸೆಲ್ಲಿಗೆ ಅಧಿಕಾರ ಕೊಟ್ಟಿದ್ದೇವೆ. ಸುಳ್ಳು ಜಾತಿ ಪ್ರಮಾಣ ಪತ್ರಗಳು ಅಂದರೆ ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ವರ್ಗಗಳು ಅಲ್ಲದೆ ಇರುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಎಂದು ಹೇಳಿ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಾರೆ. ಈಗಾಗಲೇ ಕಾನಡಿಯವರು ಹೇಳಿದ ಹಾಗೆ ಮಾಲೇರು (Maleru) ಎಸ್. ಟಿ, ಲಿಸ್ಟ್‌ನಲ್ಲಿದ್ದಾರೆ. ಅವರು ಬ್ರಾಹ್ಮಣ ಜಾತಿಗೆ ಸೇರಿದವರಂತೆ ಅಂಥವರು ಎಸ್. ಟಿ. ಜಾತಿಗೆ ಸೇರಿದವರೆಂದು ಅದರ ಲಾಭ ತೆಗೆದುಕೊಂಡಿದ್ದಾರೆ ಅದೇ ರೀತಿ ನಾಯಕ, ಬೇಡ, ತಳವಾರ, ವಾಲ್ಮೀಕಿ ಜನಾಂಗದವರು ಪ್ರಯತ್ನ ಮಾಡಿದ್ದಾರೆ. Nayaka is in the ST list. ಅದೇರೀತಿ ನಾಯಕ, ಬೇಡ, ತಳವಾರ, ವಾಲ್ಮೀಕಿ, ಪರಿವಾರ ಜನಾಂಗದವರು.....

ಶ್ರೀ ಬಿ. ಬಸವಲಿಂಗಪ್ಪ.—ಪಂಲೇರು ಮಾಲೇರು ಎರಡರ ವ್ಯತ್ಯಾಸ ಹೇಳಿ.

ಶ್ರೀ ಜಿ. ಬಸವಣ್ಣೆಪ್ಪ.—ನಾಯಕ ಎಸ್.ಟಿ. ಲಿಸ್ಟ್‌ನಲ್ಲಿದ್ದಾರೆ. ಈ ಜನರೂ ಲಾಭವನ್ನು ತೆಗೆದುಕೊಂಡಿದ್ದಾರೆ. ಮೇದಾರ ಎಂಬುವವರು ಬಿದುರು ಕೆಲಸ ಮಾಡತಕ್ಕವರು, ಅವರೂ ಕೂಡ ಲಾಭ ತೆಗೆದುಕೊಂಡಿದ್ದಾರೆ. ಕೋಟೆಗಾರ, ಮೈತ್ರಿ ಎಂಬ ಜಾತಿಗಳು ಎಸ್.ಸಿ. ಲಿಸ್ಟ್‌ನಲ್ಲಿವೆ. ಕೋಟೆ ಕ್ಷತ್ರಿಯ, ರಾಮಕ್ಷತ್ರಿಯ ಮತ್ತು ಶೇರೆಗಾರ ಈ ಜನರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕವರು. ಇವರೂ ಸಹ ಎಸ್.ಟಿ. ಲಿಸ್ಟ್‌ನಲ್ಲಿದ್ದಾರೆ ಮತ್ತು ಅದರ ಲಾಭ ತೆಗೆದುಕೊಂಡಿದ್ದಾರೆ. ೧೯೮೨ರಿಂದ ಮಾರ್ಚ್ ೧೯೮೬ರ ವರೆಗೆ ಈ ರೀತಿಯ ಸುಳ್ಳು ಜಾತಿ ಪತ್ರಗಳನ್ನು ತೆಗೆದುಕೊಂಡಿರುವ ಬಗ್ಗೆ ೧೧೨೬ ದೂರುಗಳು ಬಂದಿವೆ. ೮೩೦ ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡಿದೆ. ಇನ್ನುಳಿದ ಪ್ರಕರಣಗಳಲ್ಲಿ ವಿಚಾರಣೆ ನಡೆಯಬೇಕಿದೆ. ೫೨೧ ಪ್ರಕರಣಗಳಲ್ಲಿ ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆಂಬ ಆರೋಪ ಸ್ಥಿರಪಟ್ಟಿದೆ. ೩೦೯ ಪ್ರಕರಣಗಳಲ್ಲಿ ತೆಗೆದುಕೊಂಡಿರುವುದು ರಿಯಲ್ ಆಗಿದೆ ಎಂದು ಆಗಿದೆ. ಸ್ಥಿರಪಟ್ಟ ೫೨೧ ಪ್ರಕರಣಗಳಲ್ಲಿ ೧೫೯ ಪ್ರಕರಣಗಳು ರಾಜ್ಯ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಿದ್ದು. ಇನ್ನುಳಿದ ಪ್ರಕರಣಗಳು ಕೇಂದ್ರ ಸರ್ಕಾರದ ಬ್ಯಾಂಕುಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿರುವ ನೌಕರರಿಗೆ ಸಂಬಂಧಪಟ್ಟಿದ್ದು. ಇನ್ನು ೩೬೨ ಪ್ರಕರಣಗಳು ಕೇಂದ್ರ ಸರ್ಕಾರದ ಬ್ಯಾಂಕುಗಳು ಆಗಿರಬಹುದು, ನಿಗಮಂಗಳಾಗಿರಬಹುದು, ೫೨೧ ಪ್ರಕರಣಗಳ ಪೈಕಿ ೩೩೪ ಪ್ರಕರಣಗಳು ಅಂದರೆ ಅದರಲ್ಲಿ ೬೪ ಪ್ರಕರಣಗಳು ರಾಜ್ಯ ಸರ್ಕಾರದ ನೌಕರರಿಗೆ ಸಂಬಂಧಿಸಿದ್ದು, ೨೭೦ ಪ್ರಕರಣಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು. ಇವುಗಳ ಬಗ್ಗೆ ಪೋಲೀಸ್ ಠಾಣೆಯಲ್ಲಿ ಕೇಸ್ ರಿಜಿಸ್ಟರ್ ಮಾಡಿದ್ದೇವೆ. ೩೩೪ ಪ್ರಕರಣಗಳ ಪೈಕಿ ೧೮೭ ಪ್ರಕರಣಗಳಲ್ಲಿ ಈಗಾಗಲೇ ಮಾನ್ಯ ಸದಸ್ಯರಾದ ಕಾನಡಿಯವರು ಹೇಳಿದ ಹಾಗೆ ೨೩-೧-೮೯ರಂದು ಸರ್ಕಾರ ಆದೇಶ ಹೊರಡಿಸಿ ಮುಂದಿನ ಕ್ರಮವನ್ನು ಸ್ಥಗಿತಗೊಳಿಸಬೇಕೆಂದು ಹೇಳಿದೆ. ಈ ಬಗ್ಗೆ ಪಾರ್ಲಿಮೆಂಟ್ ಮುಂದೆ ಕಾಂಪ್ರೆಹೆನ್ಸೀವ್ ಬಿಲ್ ಬಂದಿದೆ. ಕೇಂದ್ರ ಸರ್ಕಾರದ ಹೋಮ್ ಮಿನಿಸ್ಟ್ರಿಯಿಂದ ನಮಗೆ ಕಾಗದ ಕೂಡ ಬಂದಿದೆ. ಅದಾದ ಮೇಲೆ ನಾಯಕ ಜನಾಂಗದವರು ನಮಗೆ ಬೇಡಿಕೆ ಕೊಟ್ಟರು. ನಾವು ಪೆಡ್ಡೂಲ್ಡ್ ಟ್ರೈಬಿನಲ್ಲಿದ್ದೇವೆ, ೧೯೭೬ರಲ್ಲಿ ಭಾರತ ಸರ್ಕಾರದವರು ಬಿಲ್ ತಂದು ವಿರಿಯಾ ರಿಸ್ಟ್ರಿಕ್ಷನ್ ರಿಮೂವಲ್ ಮಾಡಿದ್ದರಿಂದ ಪೆಡ್ಡೂಲ್ಡ್ ಟ್ರೈಬಿನಲ್ಲಿದ್ದೇವೆ, ಆದ್ದರಿಂದ ನಮ್ಮನ್ನು ಇದರಲ್ಲಿ ಸೇರಿಸಿ ಎಂದು ಬೇಡಿಕೆ ಇಟ್ಟರು. ಅದಾದ ನಂತರ ಸತತವಾಗಿ ಸಚಿವ ಸಂಪುಟದಲ್ಲಿ ಕೂಡ ಇದರ ಬಗ್ಗೆ ಚರ್ಚೆ ನಡೆದು ನಾಯಕ, ತಳವಾರ, ವಾಲ್ಮೀಕಿ, ಬೇಡ, ಪರಿವಾರ ಪೆಡ್ಡೂಲ್ಡ್ ಟ್ರೈಬ್ ಎಂದು ತೀರ್ಮಾನ ತೆಗೆದುಕೊಂಡು ರೆಕಮೆಂಡ್ ಮಾಡಿದ್ದು ನಿಜ. ನಾಯಕ ಎಂಬುದು ವಾಲ್ಮೀಕಿ, ಬೇಡ ಎಂಬುದು ಎಸ್.ಟಿ. ಹೆಸರಿನಲ್ಲಿದ್ದು ಪಾರ್ಲಿಮೆಂಟ್ ಮುಂದೆ ಈ ಬಗ್ಗೆ ಬಿಲ್ ಇರುವುದರಿಂದ ಕೆಲವರಿಗೆ ಪ್ರೊಮೋಷನ್ ಬರುವುದಿದ್ದು ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡಿರುವುದರಿಂದ ಅದು ತೀರ್ಮಾನವಾಗುವವರೆಗೆ ಅಡ್‌ಹಾಕ್ ಅರೇಂಜ್‌ಮೆಂಟ್ ಮಾಡಿ ಎಂದು ರೆಪ್ರಸೆಂಟೇಷನ್ ಕೊಟ್ಟಿದ್ದರಿಂದ ಅಡ್‌ಹಾಕ್ ಅರೇಂಜ್‌ಮೆಂಟ್ ಮಾಡಿದೆ. ಕೇಂದ್ರ ಸರ್ಕಾರದ ಕಾಂಪ್ರೆಹೆನ್ಸೀವ್ ಬಿಲ್ ಮುಂದಿನ ಅಧಿವೇಶನದಲ್ಲಿ ಬರುವುದಿದೆ. ಮಾನ್ಯ ಬಸವಲಿಂಗಪ್ಪನವರಿಗೆ ಮತ್ತು ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರಿಗೆ ಇದು ಗೊತ್ತಿದೆ, ಅಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಆದರ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರಾದ ಕಾನಡಿಯವರು ತಹಸೀಲ್ದಾರ್ ಅವರು ಸರ್ಟಿಫಿಕೇಟ್ ಕೊಡುವಾಗ ಪೂರ್ವಾಪರ ವಿಚಾರ ಮಾಡದೆ ಹೇಗೆ ಕೊಟ್ಟರು ಎಂದು ಕೇಳಿದರು. ತಹಸೀಲ್ದಾರರು ತಾಲ್ಲೂಕ್ ಮ್ಯಾಜಿಸ್ಟ್ರೇಟ್ ಕೂಡ ಆಗಿರುತ್ತಾರೆ. ಅವರ ಹತ್ತಿರ ಸಂಪೂರ್ಣ ಮಾಹಿತಿ ಇರಬೇಕು. ಆದರ ಸಿನಾನಂಸ್ ಯಾವುದು ಕ್ಲಿಯರಾಗಿದೆ ಎಂಬುದು

ಅವರ ಹತ್ತಿರ ಇರುತ್ತದೆ. ನಾನು ಸಮಾಜ ಕಲ್ಯಾಣ ಮಂತ್ರಿಯಾಗಿ ಎರಡು ವರ್ಷದಿಂದ ಇದ್ದೇನೆ. ನಾನು ಸಿ.ಆರ್.ಇ. ಸೆಲ್ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಖಿಖಿಳ ಜನರಿಗೆ ಏನು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಆ ತಹಶೀಲ್ದಾರರು, ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಕಾನಡೆಯವರು ಕೇಳಿದರು. ಇದುವರೆವಿಗೂ ಎಷ್ಟು ಜನ ತಹಶೀಲ್ದಾರರ ಮೇಲೆ ಕ್ರಮ ತೆಗೆದುಕೊಂಡಿದ್ದೀರೆಂದು ಅವರು ಕೇಳಿದರು. ಇದುವರೆವಿಗೂ ಯಾರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಅದು ಪ್ರೊಸೆಸ್‌ನಲ್ಲಿ ಇದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಹಕ್ಕನ್ನು ಮೊಟಕುಗೊಳಿಸುವುದರಲ್ಲಿ ಯಾರು ಯಾರು ಭಾಗಿಗಳಾಗಿದ್ದಾರೆ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕೆನ್ನುವುದರಲ್ಲಿ ನಾನೂ ಕೂಡಾ ಅವರ ಜೊತೆ ಇದ್ದೇನೆ. ಈ ರೀತಿ ಅನ್ಯಾಯವಾಗಿ ಬಾರದೆಂದು ನನಗೂ ಅಷ್ಟೇ ಕಳಕಳಿ ಇದೆ. ಇದರ ಬಗ್ಗೆ ಅಷ್ಟೇ ಎಚ್ಚರವಹಿಸಿ ಕೆಲಸ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಿ ಈ ಒಂದು ವಿಷಯವನ್ನು ಈ ಮನೆಯಲ್ಲಿ ಎತ್ತಿ ಏನು ಅವರು ಬೆಳಕು ಚೆಲ್ಲಿದ್ದಾರೆ ಅದಕ್ಕೆ ಅಭಿನಂದಿಸುತ್ತೇನೆ. ಮತ್ತು ನನ್ನ ಹೇಳಿಕೆಯಿಂದ ರಾಜ್ಯದಾದ್ಯಂತ ಜಾಗೃತಿ ಉಂಟಾಗತಕ್ಕ ಒಂದು ವಿಚಾರವಾದು ಆಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಸಂವಿಧಾನಾತ್ಮಕ ಹಕ್ಕುಗಳನ್ನು ಯಾರೇ ಚ್ಯುತಿ ಮಾಡಿರಲಿ, ತಹಶೀಲ್ದಾರರೇ ಮೋಸ ಮಾಡಿದರೂ ಅವರ ಮೇಲೆ ಐಪಿಸಿ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದು ಮುಂದು ನೋಡುವುದಿಲ್ಲ ಎನ್ನುವ ಭರವಸೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಈ ಬಗ್ಗೆ ಈಗಾಗಲೇ ಕಾನಡೆಯವರು ಹೇಳಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಕೊಟ್ಟ ಸೌಕರ್ಯಗಳನ್ನು ಬೇರೆಯವರು ತೆಗೆದುಕೊಂಡಿದ್ದಾರೆಂದು ಹೆಸರನ್ನು ಸಹಿತಾ ಓದಿ ಹೇಳಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟ ಶೋಷಣೆಗೆ ಒಳಪಟ್ಟ ಜನರಿಗೆ ಕೆಲವು ವಿಶಿಷ್ಟವಾದ ಸೌಕರ್ಯಗಳನ್ನು ಸಂವಿಧಾನದ ಮುಖಾಂತರ ಬಾಬಾಸಾಹೇಬ್ ಅಂಬೇಡ್ಕರ್‌ರವರು ದೊರಕಿಸಿ ಕೊಟ್ಟರು. ಅದನ್ನು ಬೇರೆ ಕೆಲವರು ಕಿತ್ತುಕೊಳ್ಳಬೇಕೆಂದು ಏನು ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ತಾವು ಬಲಿಯಾಗಬಾರದು ಎಂದು ನಮ್ಮ ಕಳಕಳಿ. ಈ ಬಗ್ಗೆ ಮಾನ್ಯ ಮಂತ್ರಿಗಳೂ ಪ್ರಯತ್ನ ಪಡುತ್ತಿರುವುದಾಗಿ ಹೇಳಿದರು, ಬಹಳ ಸಂತೋಷ. ಆದರೆ ರಾಜಕೀಯದಲ್ಲಿ ಒತ್ತಡ ಬಹಳ ಇದೆ. ಸುಮಾರು ೪೦ನೇ ಇಸವಿಯಿಂದ ಇಲ್ಲಿಯವರೆಗೆ ೩೦ ವರ್ಷಗಳಲ್ಲಿ ಒತ್ತಡದ ಮೇಲೆ ನೀವು ಒಂದು ಲಿಸ್ಟ್‌ನ್ನು ಕಳುಹಿಸುತ್ತೀರಿ. ಅದು ಒಂದು ಕಡೆ ಇರಲಿ. ಆ ವಿಚಾರ ಈಗ ಬೇಡ. ಎರಡನೆಯದಾಗಿ ತಾವು ಹೋದ ಸಲ ಲೆಟರ್ ನಂ. ಎಸ್‌ಡಬ್ಲ್ಯೂಎಲ್ ೧೦೪ ಎಸ್‌ಎಡಿ ೧೬-೮೯-೧೯೮೪ ಮತ್ತು ೨೮-೧೧-೧೯೮೪ರಲ್ಲಿ ಈ ಒಂದು ಪತ್ರದ ಆಧಾರದ ಮೇಲೆ ಒಂದು ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದಿರಿ.

ಇದರಲ್ಲಿ ಆಗಿನ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದ ವಿ.ಎಲ್, ಪಾಟೀಲರು ಅಧ್ಯಕ್ಷರಾಗಿದ್ದರು, ಹಾಗೂ ಶ್ರೀ ರಘುಪತಿ, ಸಿದ್ದರಾಮಯ್ಯ, ವೀರಣ್ಣ ಮೊಹಮದ್ ಮೊಹಿನುದ್ದೀನ್ ಹಾಗೂ ನಾನು ಸದಸ್ಯರಾಗಿದ್ದೆವು. ಮತ್ತೆ ''ಮಾಲೇರು'' ಕಮ್ಯುನಿಟಿಯ ಪ್ರೆಸಿಡೆಂಟ್‌ಗೆ ರೆಪ್ರೆಸೆಂಟೇಷನ್ ಕೊಟ್ಟಿದರು. ಹಾಗೂ ಸೋಶಿಯಲ್ ವೆಲ್‌ಫೇರ್ ಇಲಾಖೆಯ ಸೆಕ್ರೆಟರಿಯವರು ಸೇರಿದಂತೆ ೮ ಜನರ ಸಮಿತಿಯನ್ನು ನೇಮಿಸಲಾಗಿತ್ತು. ಅದರ ಉದ್ದೇಶ ಏನೆಂದರೆ, ಒಂದು ಕಡೆ ಈ ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರಿಗೆ ಸಿಗತಕ್ಕ ಸೌಕರ್ಯ ನ್ಯಾಯವಾಗಿ ಸಿಗುತ್ತಾ ಇಲ್ಲ, ಬೇರೆಯವರು ಹೊಡೆಯುತ್ತಿದ್ದಾರೆಂಬುದ್ದರಿಂದ ನೀವು ಇದಕ್ಕೆ ಪಡೆ ಮಾಡಬೇಕೆನ್ನುವ ಕೂಗು ಇದ್ದಾಗ ಇದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳಿ ಇದನ್ನು ಮಾಡಿದಿರಿ. ಹಾಗೂ ಎರಡನೆಯದಾಗಿ ನೀವು ನಮಗೆ ಹೇಳಿದ ವಾಲ್ಮೀಕಿ, ನಾಯಕ, ಪರಿವಾರ ಮುಂತಾದವರು ನಮಗೆ ಕನಿಷ್ಟ ಪಕ್ಷ ಎಜುಕೇಷನಲ್ ಕನೆಸೆಷನ್ ಆದರೂ ಕೊಡಬೇಕು ಎಂದು ಅವರ ಕೂಗು ಒಂದು ಕಡೆ ಇದ್ದುದರಿಂದ ಇದನ್ನು ಗಮನದಲ್ಲಿ ಇಟ್ಟುಕೊಂಡು ಈ ಒಂದು ಸರ್ಕ್ಯುಲರ್ ಹೊರಡಿಸಿ ಕಮಿಟಿಯನ್ನು ಮಾಡಿದ್ದೀರಿ. ಈ ಕಮಿಟಿ ಇಲ್ಲಿಯವರೆಗೆ ಒಂದೂ ವಿಾಟಿಂಗ್ ಸಹ ಕೂರಲಿಲ್ಲ. ಮಾನ್ಯ ವಿ.ಎಲ್. ಪಾಟೀಲರು ಆದಮೇಲೆ ಮಾನ್ಯ ಬಸವಣ್ಣಪ್ಪನವರು ಬಂದರು. ಇವರು ಕೂಡಾ ಕಮಿಟಿ ಮೂಲಕ ಇದನ್ನು ಬಗೆಹರಿಸಬೇಕೆಂದು ವಿಚಾರ ಮಾಡಲಿಲ್ಲ. ಇದನ್ನು ಹೀಗೇ ಇಡಬೇಕೆಂದು ಸರ್ಕಾರದ ಉದ್ದೇಶವೇ ? ಸ್ವಲ್ಪ ಹೆಚ್ಚು ಕಡಿಮೆಯಾದರೆ ಪರಿವಾರ, ಬೇಡರು ನಿಮ್ಮ ಮೇಲೆ ಬೀಳುತ್ತಾರೆ. ಇಲ್ಲ ಇದನ್ನು ಮಾಡದೇ ಹೋದರೆ

ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಮೇಲೆ ಬೀಳುತ್ತಾರೆ. ಅದಕ್ಕೆ ನೀವು ಉಭಯಂ ಸಂಕುದಲ್ಲಿದ್ದೀರಿ. ಏಕೆ ತೀರ್ಮಾನ ಮಾಡುವುದು ಎಂದು ಹೇಳಿ ಸರ್ಕಾರದವರು ತಳ್ಳಿಕೊಂಡು ಮುಂದೆ ಬರುತ್ತಿದ್ದಾರೆ. ಏಕೆಂದರೆ ಒಂದರ ಮೇಲೆ ಒಂದು ಎಲೆಕ್ಷನ್ ಬಂತಲ್ಲ ? ಮಂಡಲ ಪಂಚಾಯತ್, ಜಿಲ್ಲಾಪರಿಷತ್ ಅದು ಇದು ಎಂದು ಈ ರೀತಿಯಾಗಿ ಅದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ದಯವಿಟ್ಟು ಇದು ಆಗಬಾರದು. ಧೈರ್ಯದಿಂದ ಯಾರಿಗೆ ಈ ಸವಲತ್ತುಗಳು ಸಲ್ಲಬೇಕೋ ಅವರಿಗೆ ಕೊಡಿ. ಯಾರಿಗೆ ಸಲ್ಲಬೇಕಾಗಿಲ್ಲ ಅವರಿಗೆ ಬೇರೆ ರೀತಿಯಿಂದ ಫೆಸಲಿಟೀಸ್ ಮಾಡಿಕೊಡಿ. ನಾವು ಬೇಡ ಅಂತ ನಿಮಗೆ ಅಡ್ಡ ಬಂದಿಲ್ಲವಲ್ಲ. ಆದ್ದರಿಂದ ಪರಿಶಿಷ್ಟವರ್ಗಕ್ಕೆ ಏನು ಕೊಡಬೇಕೋ ಅದನ್ನಷ್ಟು ಕೊಡಿ. ಬೇರೆಯವರಿಗೆ ಯಾವರೀತಿ ಕ್ರಿಯೇಟ್ ಮಾಡಿ ಕೊಡುತ್ತೀರೋ ಅದು ನಿಮಗೆ ಬಿಟ್ಟದ್ದು. ಈಗಾಗಲೇ ತಮಗೆ ಗೊತ್ತಿದಂತೆ ಬ್ಯಾಕ್‌ವರ್ಡ್‌ಕ್ಲಾಸಸ್ ಕಮೀಷನ್ ಆಯಿತು. ಒಂದಲ್ಲ ಎರಡು-ಮೂರು ಆಯೋಗಗಳನ್ನು ಮಾಡಿದರು. ಅದರ ಪ್ರಕಾರ ನೀವು ಅವರಿಗೆ ಏ ಲಿಸ್ಟ್‌ನಲ್ಲೇ ಸೇರಿಸಿಬಿಡಿ. ಅಥವಾ ಇನ್ನೂ ಹೆಚ್ಚಿನ ಸವಲತ್ತು ಸಿಗಬೇಕು ಎನ್ನುವುದಾದರೆ ಇನ್ನೂ ಯಾವುದಾದರೊಂದು ಕ್ಯಾಟಗರಿಯನ್ನು ಕ್ರಿಯೇಟ್ ಮಾಡಿ ಕೊಡಿ. ನಾವು ಬೇಡ ಅನ್ನುವುದಿಲ್ಲ. ಆದರೆ ಇವರ ಹೊಟ್ಟೆಯ ಮೇಲೆ ಹೊಡೆದು ಇನ್ನೊಬ್ಬರನ್ನು ಬದುಕಿಸಬೇಕು ಎನ್ನತಕ್ಕಂಥ ನೀತಿಯನ್ನು ನೀವು ಅಡಾಪ್ಟ್ ಮಾಡಿದರೆ ಅದು ಸರಿಯಾಗುವುದಿಲ್ಲ, ನಾಳೆ ನಿಮಗೂ ಕೆಟ್ಟ ಹೆಸರು ಬರುತ್ತದೆ ಮತ್ತು ಯಾವ ಜನಾಂಗದ ಹೆಸರಿನ ಮೇಲೆ ಆರಿಸಿಬಂದು ನಿಮ್ಮ ಕೈಯಿಂದ ನ್ಯಾಯ ದೊರಕಿಸಿಕೊಡುವುದಕ್ಕೆ ಆಗದೇ ಹೋದರೆ ಬೇರೆಯವರು ಖಂಡಿತವಾಗಿ ನಿಮ್ಮನ್ನು ದೋಷಕ್ಕೆ ಗುರಿಮಾಡುತ್ತಾರೆ. ನಾವು ಇಲ್ಲಿ ಸದಸ್ಯರಾಗಿ ಆಯ್ಕೆಯಾಗಿರುವುದರಿಂದ ನಾಳೆ ನಮ್ಮನ್ನು ನೀವು ಏನು ಮಾಡಿದಿರಿ ? ಜನರ ರಕ್ಷಣೆ ಮಾಡಿದಿರಾ ಎಂದು ಕೇಳುತ್ತಾರೆ. ನಿಮ್ಮಷ್ಟಕ್ಕೆ ನೀವು ಮಜಾ ಮಾಡಿಕೊಂಡು ಬಂದಿರಿ, ನೀವು ಮುಂದೆ ಬಂದಿರೇ ಹೊರತು ಈ ಜನಾಂಗಕ್ಕೆ ಸಲ್ಲಿಸತಕ್ಕಂಥ ಸವಲತ್ತುಗಳನ್ನು ಅವರಿಗೆ ಕೊಡುವ ಪ್ರಯತ್ನ ಮಾಡಲಿಲ್ಲ ಎನ್ನತಕ್ಕಂಥ ಅಪವಾದ ಈ ಸದನದಲ್ಲಿರತಕ್ಕಂಥ ಎಲ್ಲಾ ಶಾಸಕರಿಗೂ ಬರುತ್ತದೆ. ಆದರಿಂದ ತಾವು ಧೈರ್ಯ ತೋರಿಸಬೇಕು. ನಾನು ತಮ್ಮ ಈ ಕಮಿಟಿಯಲ್ಲಿ ಕೆಲಸಮಾಡಿದೆ. ನನ್ನನ್ನು ನಾಮಿನೇಟ್ ಮಾಡಿ ಎರಡು ವರ್ಷ ಐದು ತಿಂಗಳಾಯಿತು. ಇಲ್ಲಿಯವರೆಗೂ ಒಂದು ಮಿಟಿಂಗ್ ಸಹ ಕರೆದಿಲ್ಲ. ಅದಕ್ಕೆ ಅಧ್ಯಕ್ಷರೇ, ತಮ್ಮ ಮೂಲಕ ಅವರಿಗೆ ನನ್ನ ರಾಜೀನಾಮೆಯನ್ನು ಕಳಿಸಿಕೊಡುತ್ತಿದ್ದೇನೆ. ಆಮೇಲೆ ಈ ಕಮಿಟಿಯನ್ನು ಡಿಸಾಲ್ವ್ ಮಾಡಬೇಕಾಗುತ್ತದೆ. ಸುಮ್ಮನೆ ಇದನ್ನಿಟ್ಟರೆ ಏನೂ ಪ್ರಯೋಜನ ಇಲ್ಲ. ಆದ್ದರಿಂದ ಅಧ್ಯಕ್ಷರೇ, ತಾವಾದರೂ ಅವರಿಗೆ ಡೈರೆಕ್ಷನ್ಸ್ ಕೊಡಿ. ಇಂತಹ ಕಮಿಟಿ ಇರಬಾರದು ಮತ್ತು ಬೇರೆಯವರನ್ನು ಈ ಕಮಿಟಿಗೆ ಆರಿಸಬಾರದು. ಏನು ನಾವು ಕಮಿಟಿ ಮಾಡಿದ್ದೇವೆ ಇದರಿಂದ ನಿಮ್ಮ ಸಮಸ್ಯೆ ಪರಿಹಾರ ಆಗುತ್ತದೆ ಎಂದು ಕಣ್ಣು ಒರೆಸತಕ್ಕಂಥ ಒಂದು ಆರ್ಡರ್‌ನ್ನು ಕೊಟ್ಟು ಮೋಸ ಮಾಡತಕ್ಕಂಥಾದ್ದನ್ನು ಮಾಡಬಾರದು ಎಂದು ನಾನು ಕಳಕಳಿಯಿಂದ ಪುನವಿಮಾಡಿಕೊಳ್ಳುತ್ತೇನೆ. You dissolve this committee and take action against those who have submitted false report. ಈಗಾಗಲೇ ಅವರು ಸಬ್‌ಮಿಟ್ ಮಾಡಿದ್ದಾರೆ. ನಿಮ್ಮಲ್ಲೂ ಕೂಡ ಅಂಕಿಅಂಶಗಳು ಇವೆ. ನೀವು ಯಾರಿಗೂ ಹೆದರಬೇಕಾಗಿಲ್ಲ. ಯಾಕೆಂದರೆ ಒಬ್ಬ ಬಾಬಾ ಸಾಹೇಬ್ ಅಂಬೇಡ್ಕರ್ ಇಲ್ಲಿ ಬಂದಮೇಲೆ ಯಾರಿಗೆ ಓದಲಿಕ್ಕೆ ಬರೆಯಲಿಕ್ಕೆ ಬರುತ್ತಿದ್ದಿಲ್ಲ, ಅಂತಹ ಜನಕ್ಕೆ ಸಪೋರ್ಟ್‌ಮಾಡಿ ಅವರಿಗೆ ಸಿಗಬೇಕಾದ ಸವಲತ್ತುಗಳನ್ನು ಸಿಗುವ ಹಾಗೆ ಅವರು ಮಾಡಿದರು. ಇವತ್ತು ಲಕ್ಷಾಂತರ ಜನ ವಿದ್ಯಾವಂತರು ಇದ್ದು ಕಾನ್ಸ್‌ಟ್ಯೂತ್ಸೆನ್ಸಿ ಪ್ರಾವಿಜನ್ ಅನ್ನು ಪ್ರೊಜೆಕ್ಟ್ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ ಎಂದರೆ ನಾವು ಯಾರೂ ಕೂಡ ಖಂಡಿತವಾಗಿಯೂ ಇಲ್ಲಿ ತಲೆಯೆತ್ತುವಹಾಗಿಲ್ಲ. ಇದು ನಮ್ಮೆಲ್ಲರಿಗೂ ಅಗೌರವ ತರತಕ್ಕ ವಿಷಯ ಆಗಿದೆ. ಅದಕ್ಕೇ ತಾವು ಧೈರ್ಯವನ್ನು ತಾಳಬೇಕು. ಬೇರೆಯವರಿಗೆ ಸವಲತ್ತುಗಳನ್ನು ಕೊಡಲಿಕ್ಕೆ ನಾವು ಬೇಡ ಅಂತ ಹೇಳುವುದಿಲ್ಲ. You post them in better position, but not in this category. ಅದನ್ನು ದಯವಿಟ್ಟು ಮಾಡಬೇಡಿ. ಮುಖ್ಯಮಂತ್ರಿಗಳ ಜತೆಯಲ್ಲಿ ಕೂಡ ಚರ್ಚೆ ಮಾಡಿ ಯಾರ್ಯಾರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇದರಿಂದ ಮುಂದೆ ಹೀಗೆ ಆಗುವುದನ್ನು ತಡೆಗಟ್ಟಬಹುದು. ಈಗ ಇವರ ಮೇಲೆ ಆ್ಯಕ್ಷನ್ ತೆಗೆದುಕೊಂಡರೆ ಮುಂದೆ ಈರೀತಿ ಫಾಲ್ಸ್ ಸರ್ಟಿಫಿಕೇಟ್ ಕೊಡಲಿಕ್ಕೆ ಯಾರಿಗೂ ಧೈರ್ಯ ಬರುವುದಿಲ್ಲ. ಇಲ್ಲದಿದ್ದರೆ ‘ಚಿಲ್ಲರ್ತ್ರ ಹೈ”ಅಂತ ಹೇಳಿ ಯಾರು ಇಂತಹ ಸರ್ಟಿಫಿಕೇಟ್ ತೆಗೆದುಕೊಂಡು ಜೂನಿಯರ್ ಇಂಜಿನಿಯರ್ಸ್ ಆಗಿದ್ದಾರೆ, ಕ್ಲರ್ಕ್ ಆಗಿದ್ದಾರೆ ಸ್ಟೆನೋ ಆಗಿದ್ದಾರೆ, ಅವರನ್ನು ನೋಡಿ

ಇನ್ನೊಬ್ಬರೂ ಅದೇರೀತಿ ಪ್ರೊಡ್ಯೂಸ್ ಮಾಡುತ್ತಾರೆ. ಈ ಹವ್ಯಾಸಕ್ಕೆ ಬೇರೆಯವರೂ ಹೋಗುತ್ತಾರೆ. ಅದಕ್ಕೆ ನೀವು ಸ್ವಲ್ಪ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡು ಕೆಲವು ಜನರನ್ನಾದರೂ ಡಿಸ್‌ಮಿಸ್ ಮಾಡಿ. ಆಮೇಲೆ ಸೆಂಟ್ರಲ್ ಎಂಪ್ಲಾಯೀಸ್ ಇದ್ದಾರೆ. ಅವರು ನಮ್ಮ ಕೈಯಲ್ಲಿ ಇಲ್ಲ ಎಂದು ಹೇಳುತ್ತೀರಿ. ನೀವು ಅಂತಹವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿ, ನಂತರ ಸಂಬಂಧಪಟ್ಟವರು ಶಿಸ್ತಿನ ಕ್ರಮ ಕೈಗೊಳ್ಳುವುದೋ, ಡಿಸ್‌ಮಿಸ್ ಮಾಡುವುದೋ ಮಾಡುತ್ತಾರೆ. ಪಬ್ಲಿಕ್ ಅಂಡರ್‌ಟೇಕಿಂಗ್ ರೂಲ್ಸ್ ಅಂಡ್ ರೆಗ್ಯುಲೇಶನ್ಸ್ ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಅವರ ಮೇಲೆ ಫಾಲ್ಸ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದಾರೆ, ಚೀಟ್ ಮಾಡಿದ್ದಾರೆ ಅಂತ ಹೇಳಿ ನೀವು ಕ್ರಿಮಿನಲ್ ಕೇಸ್ ಹಾಕಿ.....

ಅಧ್ಯಕ್ಷರು.—೪೨೦ ಐ.ಪಿ.ಸಿ. ಮೇಲೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೪೨೦ ಐ.ಪಿ.ಸಿ. ಮೇಲೆ ಕೇಸ್‌ನ್ನು ಹಾಕಿ ರಿಜಿಸ್ಟರ್ ಮಾಡಿಸಿದರೆ ತತ್‌ಕ್ಷಣ ಅವರನ್ನು ಸಸ್ಪೆಂಡ್ ಮಾಡುತ್ತಾರೆ. ಇದಕ್ಕೆ ನೀವು ಧೈರ್ಯ ತೋರಿಸಬೇಕು ಏಕೆಂದರೆ ರಾಜಕೀಯ ಒತ್ತಡದಲ್ಲಿ ಅನೇಕಸಲ ನೀವು ನಿಷ್ಕ್ರೂರ ಏಕೆ ಆಗುವುದು ಎಂದು ಸುಮ್ಮನಾದರೆ ಈ ಜನಾಂಗಕ್ಕೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಶ್ರೀ ಬಸವಣ್ಣಪ್ಪನವರೇ ಅವರು ಹೇಳಿದ್ದು ಕರೆಕ್ಟ್. ನೀವು ಯಾರ ಮಂತ್ರಾಜೂ ನೋಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೋಡಿ, ನಮ್ಮ ಪರವಾಗಿ ಅಧ್ಯಕ್ಷರು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಕೂಡ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಇದನ್ನು ನಿರ್ದಾಕ್ಷಿಣ್ಯವಾಗಿ ಮಾನ್ಯ ಸಚಿವರು ಮಾಡುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡು, ನಮ್ಮ ಮಾತಿಗೆ ಮನ್ನಣೆ ಕೊಡಬೇಕೆಂದು ಮಾನ್ಯ ಕಾನಡೆಯವರು ಏನು ಕೇಳಿದ್ದಾರೆ, ಅದಕ್ಕೂ ಮನ್ನಣೆ ಕೊಡಬೇಕೆಂದು ಕೇಳಿಕೊಂಡು, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಮಾನ್ಯ ಕಾನಡೆಯವರಿಗೆ ಈ ಸೂಚನೆಯನ್ನು ತಂದಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಈ ವಿಷಯದಲ್ಲಿ ಮಂತ್ರಿಗಳೂ ಸಮರ್ಥನೆ ಮಾಡಿದ್ದಾರೆ ಅದರ ಜೊತೆಗೆ ನಾನೂ ಸಮರ್ಥನೆ ಮಾಡಿದ್ದೇನೆ. ಈಗ ಈ ಪ್ರಶ್ನೆ ಬಗ್ಗೆ ಈ ಸದನದಲ್ಲಿ ಬಹಳ ಸಾರಿ ತರ್ಕ ಮಾಡಿದ್ದೇವೆ. ಬಹಳ ಸಾರಿ ಹಿಂದಿನ ಮಂತ್ರಿಗಳೂ ಕೂಡ ಉತ್ತರ ಕೊಟ್ಟಿದ್ದಾರೆ. ಹಿಂದೆ ಮಾನ್ಯ ವಿ.ಎಲ್. ಪಾಟೀಲರು ಉತ್ತರ ಕೊಟ್ಟಿದ್ದರು. ಅವರು ಮಂತ್ರಿಯಾಗಿ ಈ ದೇಶಕ್ಕೆ ಒಂದು ಕೊಡುಗೆ ಕೊಟ್ಟಿದ್ದಾರೆ, ಅದೇನೆಂದರೆ, ಕಾರಂಟ ಜನಾಂಗವನ್ನು ಟ್ರೈಬ್ಸ್ ಆಗಿ ಪರಿಗಣಿಸಬೇಕೆಂದು ಕ್ಯಾಬಿನೆಟ್‌ನಲ್ಲಿ ಒತ್ತಾಯ ಮಾಡಿ ಪಟ್ಟಿಯಲ್ಲಿ ಸೇರಿಸಿದ್ದಾರೆ ೧೯೮೪ನೇ ಇಸವಿಯಲ್ಲಿ ಮಾನ್ಯ ವಿ. ಎಲ್. ಪಾಟೀಲರು ಮಂತ್ರಿಯಾಗಿದ್ದರು. ಅವರ ಕಾಲದಲ್ಲಿ ಇದನ್ನು ಹೊರಡಿಸಿದ್ದಾರೆ. ಮಾನ್ಯ ಹೆಗಡೆಯವರ ದೃಷ್ಟಿಯಲ್ಲಿ ವಿ. ಎಲ್. ಪಾಟೀಲರು ಪ್ರಭಲವಾಗಿರತಕ್ಕ ಸದಸ್ಯರು, ಅವರು ಹೇಳಿದ ಹಾಗೆ ಬಹಳ ಸದಸ್ಯರು ಹೇಳುತ್ತಾರೆ. ಅವರನ್ನು ವಿರೋಧ ಮಾಡಿಕೊಳ್ಳಬಾರದು ಎಂದು ಈ ಒಂದು ಸರ್ಕಾರಿ ಆದೇಶವನ್ನು ಮಾಡಿರುತ್ತಾರೆ, ೧೯೮೪ನೇ ಇಸವಿಯಲ್ಲಿ ೮೨೦ ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡು ಸರ್ಕಾರಿ ನೌಕರರಿಗೆ ಸೇರಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗದಂತೆ ಆರ್ಡರ್‌ನ್ನು ಕೊಟ್ಟು, ಈ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಬಾರದು ಎಂದು ನಿರ್ದೇಶನ ಕೊಟ್ಟರು. ಈಗ ಮಾನ್ಯ ವಿ. ಎಲ್. ಪಾಟೀಲರು ಮಾನ್ಯ ರಾಮಕೃಷ್ಣ ಹೆಗಡೆಯವರ ವಿರೋಧಿ ಆಗಿದ್ದಾರೆ. ಈ ಬಗ್ಗೆ ನ್ಯಾಯವಾಗಿ ಸರ್ಕಾರದ ಹುಕುಂ ಹೋಗಬೇಕು. ಈಗ ಮಾನ್ಯ ಬಸವಣ್ಣಪ್ಪನವರೂ ಇದ್ದಾರೆ, ನೀವು ಮತ್ತು ಹೆಗಡೆಯವರು ದೊಡ್ಡ ಮನಸ್ಸು ಮಾಡಿ, ಧೈರ್ಯ ಮಾಡಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ. ಮಲ್ಲಪ್ಪ.—ಯಾರು ಸಚಿವ ಸ್ಥಾನದಲ್ಲಿರುತ್ತಾರೆ, ಅವರು ಸಚಿವ ಸ್ಥಾನದಿಂದ ಹೋದ ತಕ್ಷಣ ಅವರು ಮಾಡಿರತಕ್ಕ ನಿಯಮಾವಳಿಗಳೂ ಹೋಗುತ್ತದೆಯೇ ? ಮಾನ್ಯ ಬಸವಲಿಂಗಪ್ಪನವರು ಸಚಿವರಾಗಿದ ವರು. ಹಿರಿಯ ಸದಸ್ಯರು, ಈ ರೀತಿ ಹುಳಿ ಹಿಂಡುವ ಕೆಲಸ ಮಾಡುವುದು ಬೇರೆ

ಎಂದು ಹೇಳುತ್ತೇನೆ. ಅದಕ್ಕಾಗಿ ಕಮಿಟಿ ಮಾಡಿದ್ದು, ಆ ಕಮಿಟಿ ತೀರ್ಮಾನ ಮಾಡಿದೆ, ಅದರಲ್ಲಿ ಮಾನ್ಯ ಖರ್ಗೆಯವರೂ ಇದ್ದಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಕಮಿಟಿ ಯಾವಾಗ ರಚನೆಯಾಯಿತೋ, ಆಗಲೇ ಅದು ಸತ್ತುಹೋಯಿತು.

ಶ್ರೀ ಬಿ. ಬಸವಲಿಂಗಪ್ಪ.—ಶ್ರಿಮಾನ್ ಮಲ್ಲಪ್ಪನವರಿಗೆ ಹಿಂದಿನ ಚರಿತ್ರೆ ಗೊತ್ತಿಲ್ಲ.

ಶ್ರೀ ರಾಜವರ್ಧನ್.—ಸುಳ್ಳು ಸರ್ಟಿಫಿಕೇಟ್ ಎಂದು ಕಾನಡೆಯವರು ಹೇಳಿದರಲ್ಲ, ಇವು ಈಗ್ಗೆ ೮-೧೦ ವರ್ಷಗಳ ಹಿಂದೆ ಕೆಲವರು ಕೊಟ್ಟಿದ್ದಾರೆ. ಆಗ ಯಾವ ಸರ್ಕಾರ ಇತ್ತು ಎಂಬುದನ್ನು ಅವರು ಯೋಚನೆ ಮಾಡಬೇಕು.

ಅಧ್ಯಕ್ಷರು.—ಇದಕ್ಕೆ ಎಲ್ಲರೂ ಜವಾಬ್ದಾರರು, ಅವರು, ಇವರು ಎಂದು ಏಕೆ ಹೇಳಬೇಕು ? ಈಗ ಅನ್ಯಾಯವಾಗಿದೆ ಎಂದು ಕಂಡು ಬಂದಿದೆ, ನೀವು ಹೇಳಿ.

ಶ್ರೀ ಕೆ. ಮಲ್ಲಪ್ಪ.— ಕೊಳಿ ಮಾಡಿರುವವರು ನೀವು, ತೊಳೆಯುವುದಕ್ಕೆ ನಮಗೆ ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಸರ್ಕಾರಿ ನೌಕರಿಗೆ ಸೇರಿದವರ ೧೯೮೪ರ ಹಿಂದಿನ ಪಟ್ಟಿ ಮತ್ತು ೧೯೮೪ರ ನಂತರ ಸರ್ಕಾರ ನೌಕರಿ ಮತ್ತು ಕೇಂದ್ರ ಸರ್ಕಾರದ ನೌಕರರಿಗೆ ಸೇರಿರತಕ್ಕಂಥವರ ಇನ್ನೊಂದು ಪಟ್ಟಿ. ಈ ಎರಡು ಪಟ್ಟಿಗಳನ್ನೂ ನೋಡಬೇಕು. ೧೯೮೪ರ ನಂತರ ಯಾರ್ಯಾರು ಸೇರಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ತಡೆ ಆಜ್ಞೆ ಏಕೆ ಹೊರಡಿಸಿದಿರಿ. ದಯವಿಟ್ಟು ಕ್ರಮ ತೆಗೆದುಕೊಳ್ಳಿ. ಮಾನ್ಯ ಬಸವಣ್ಣಪ್ಪನವರು ಒಂದು ಮಾತು ಹೇಳಿದರು, ಅವರು ಷಡ್ಯೂಲ್ಡ್ ಕ್ಯಾಸ್ಟ್ ಜನವಂಗಕ್ಕೆ ಸೇರಿದವರು. ಆರ್ಟಿಕಲ್ ೩೪೧-೩೪೨ರ ಪ್ರಕಾರ ರಾಷ್ಟ್ರಾಧ್ಯಕ್ಷರೇ ಕೋನೆಯ ತೀರ್ಪು ಕೊಡುವಂಥಾದ್ದು, ಈ ನಿಯಮಾವಳಿಗಳ ರಚನೆ ೧೯೫೦ರಲ್ಲಿ ಆಗಿದ್ದು. ಸುಮಾರು ೩೮ ವರ್ಷಗಳಾದ ಮೇಲೆ ಕೂಡ, ಇದನ್ನು ಬದಲಾವಣೆ ಮಾಡುವುದಕ್ಕೆ ಯಾರಿಗೂ ಹಕ್ಕಿಲ್ಲ. ಈ ಸದನಕ್ಕೂ ಇಲ್ಲ, ಸರಕಾರಕ್ಕೆ ಮೊದಲೇ ಇಲ್ಲ. ಇವನ್ನು ಪಾರ್ಲಿಮೆಂಟ್ ಮಾಡಬೇಕು. ಪಾರ್ಲಿಮೆಂಟ್‌ನವರು ಇದುವರೆಗೆ ಏನೂ ಮಾಡಿಲ್ಲ. ಎಂದರೆ ಈಗ ಯಾವುದು ಲಿಸ್ಟ್ ಮಾಡಿದ್ದಾರೆ, ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಈಗ ಯಾವುದಕ್ಕೆ ಇದೆ. ಅದರ ಪ್ರಕಾರವೇ ನಡೆಯಬೇಕೆಂದು ತಾವು ಹೇಳಿದ್ದೀರಿ, ನಾನು ಹೇಳಿದ್ದೇನೆ, ಇದರ ಮೇಲೆ ಬಹಳ ಚರ್ಚೆಯಾಗಿದೆ. ಮಾನ್ಯ ಬಸವಣ್ಣಪ್ಪನವರೂ ಇದೇ ಮಾತನ್ನು ಹೇಳಿದ್ದಾರೆ. ಆದರೆ ಈಗ ಸೇವೆಗೆ ಸೇರಿರತಕ್ಕಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದು ಪ್ರಶ್ನೆ. ಈಗ ಷಡ್ಯೂಲ್ಡ್ ಕ್ಯಾಸ್ಟ್ ಅಲ್ಲದವರು ಯಾರು ಸರ್ಕಾರದ ಸೇವೆಗೆ ಸೇರಿಕೊಂಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ, ಅವರನ್ನು ಡಿಸ್‌ಮಿಸ್ ಮಾಡಿ, ಇಂಡಿಯನ್ ಪೀನಲ್ ಕೋಡ್‌ನ ೪೨೦ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿ. ಬೇಡರು, ಬೆಸ್ತರು ಕಾರುಬಾರು ಎಂದು ತಾವು ಒಂದು ಲಿಸ್ಟ್ ಕೊಟ್ಟಿದ್ದೀರಿ. ಅದಕ್ಕೆ ನನ್ನದೇನೂ ವಿರೋಧ ಇಲ್ಲ. ಅವರಿಗೂ ಸ್ಪೆಷಲ್ ಆಗಿ ಕಾನ್‌ಸ್ಟಿಟ್ಯೂಷನ್ ಬದಲಾವಣೆ ಮಾಡಿ. ಅವಕಾಶ ಕೊಡಿ, ಇವರನ್ನೆಲ್ಲಾ ಸೇರಿಸುವುದಕ್ಕೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಒಂದು ಬದಲಾವಣೆಯನ್ನು ಮಾಡಿ, ಒಂದು ಪ್ರಾವಿಜನ್ ಮಾಡಿರಿ. ಈಗ ೩೪೧ನೇ ಆರ್ಟಿಕಲ್ ಇದೆ, ೩೪೨ ಆರ್ಟಿಕಲ್ ಇದೆ. ನೀವು ಇವರಿಗೋಸ್ಕರ ೩೪೩ನೇ ಆರ್ಟಿಕಲ್ ಮಾಡಿಕೊಳ್ಳಿ. ಇವರಿಗೂ ಕೂಡಾ ಸೌಲಭ್ಯಗಳನ್ನು ಕೊಡಬೇಕೆಂಬುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಆಗಿನ ಕಾಲದಲ್ಲಿ "ಮೂಕನಾಯಕ" ಎಂಬ ಒಂದು ಪೇಪರ್ ಹೊರಡಿಸುತ್ತಿದ್ದರು. ಏತಕ್ಕೋಸ್ಕರ ಎಂದರೆ ಈ ಮೂಕ ಜನರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಇದನ್ನು ಹೊರಡಿಸುತ್ತಿದ್ದರು, ಆದಂದರಿಂದ ಈ ಮೂಕ ಜನರಿಗೆ ಏನು ಸವಲತ್ತುಗಳನ್ನು ಕೊಟ್ಟಿದಾರೆ, ಏನು ಹಕ್ಕುಗಳನ್ನು ಕೊಟ್ಟಿದ್ದಾರೆ, ಅದನ್ನು ತಪ್ಪಿಸಿ, ಬೇರೆಯವರು ಅದನ್ನು ಕಿತ್ತುಕೊಂಡು ತಿನ್ನತಕ್ಕಂಥ ಪ್ರಸಂಗ ಬಂದಿದೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬಾರದು ಎಂದು ಮಾನ್ಯ ಖರ್ಗೆಯವರು ಹೇಳಿದ್ದಾರೆ, ಕಾನಡೆಯವರು ಹೇಳಿದ್ದಾರೆ, ನಾನೂ ಕೂಡಾ ಅದನ್ನೇ ಹೇಳುತ್ತಿದ್ದೇನೆ. ನೀವೂ ಕೂಡಾ ಇದರ ಬಗ್ಗೆ ಸ್ಥಿರವಾದ ಮನಸ್ಸು ಉಳ್ಳವರಾಗಿದ್ದೀರಿ. ನೀವು ಧೈರ್ಯವಾಗಿ ಕೆಲಸ ಮಾಡಬೇಕು. ಯಾರೇ ಆಗಿರಲಿ ನ್ಯಾಯ ಮಾಡುವುದಕ್ಕೆ ಏನಂತೆ ? ಇದರ ವಿರುದ್ಧವಾಗಿ ಯಾರು ನಡೆದಿದ್ದಾರೆ

ಅವರ ಮೇಲೆ ಕ್ರಮ ತೆಗೆದುಕೊಂಡು ನ್ಯಾಯ ಒದಗಿಸುವುದಕ್ಕೆ ಪಂಚಾಯತಿಗೆ ಹಾಕಿ, ನಿಮ್ಮ ಕ್ಯಾಬಿನೆಟ್ ಡಿಸಿಷನ್ ಏತಕ್ಕೆ ? ನಿಮ್ಮ ವಾದ ಏತಕ್ಕೆ ? ನಿಮ್ಮ ತರ್ಕ ಏತಕ್ಕೆ ? ನಿಮ್ಮ ವ್ಯಾಖ್ಯಾನ ಅಥವಾ ಟೀಕೆ ಏತಕ್ಕೆ ? ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳುವ ಶಕ್ತಿಯಿಂದ ನೀವು ಕೆಲಸ ಮಾಡಬೇಕು. ಈ ಕೆಲಸ ಮಾಡದೇ ಹೋದರೆ ನಿಮ್ಮ ಮೇಲೆ ಅಪವಾದ ಜಾಸ್ತಿಯಾಗುತ್ತದೆ. ಹಿಂದೆ ಅಧಿಕಾರಕ್ಕೆ ಬಂದವರ ಮೇಲೂ ಇದು ಇತ್ತು. ಅವರು ಹೊರಟು ಹೋಗಿದ್ದಾರೆ. ನೀವು ಬಂದಿದ್ದೀರಿ ನೀವು ನಿಮ್ಮ ವರ್ಗದವರಂ ನೀವು ಅನ್ಯಾಯ ಮಾಡುವುದಾದರೆ. ಆ ಅನ್ಯಾಯ ನಿಮ್ಮ ತಲೆಯ ಮೇಲೆ ಏರುತ್ತದೆ, ಜನರಿಗೆ ನೀವು ಅನ್ಯಾಯ ಮಾಡಿದಹಾಗೆ ಆಗುತ್ತದೆ. ನಾವೆಲ್ಲರೂ ನಿಮ್ಮಲ್ಲಿ ಕಳಕಳಿಯಿಂದ ನಿವೇದಿಸಿಕೊಳ್ಳುತ್ತೇವೆ. ನಮ್ಮಗಳ ಕಳಕಳಿಗೆ ಮನ್ನಣೆ ಕೊಟ್ಟು ತಾವು ಕೆಲಸ ಮಾಡುತ್ತೀರಿ ಎಂದು ನಂಬಿರುತ್ತೇವೆ.

† ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಸುಳ್ಳು ಜಾತಿಯ ಸರ್ಟಿಫಿಕೇಟ್‌ಗಳನ್ನು ಪಡೆದು ಎಸ್.ಸಿ. ಎಸ್.ಟಿ.ಗೆ ಸಿಕ್ಕತಕ್ಕಂಥ ಸೌಲಭ್ಯವನ್ನು ಪಡೆದುಕೊಂಡು ಅದನ್ನು ಅರಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದವರ ಮೇಲೆ ಕ್ರಮ ಕೈಗೊಳ್ಳದೇ ಇದ್ದಹಾಗೆ ಸ್ಪಾಪ್‌ಗ್ಯಾಪ್ ಅರೇಂಜ್‌ಮೆಂಟ್ ಮಾಡಿ, ಅನ್ಯಾಯ ಮಾಡಿ ೧೯೮೬ರಲ್ಲಿ ಸರಕಾರ ಒಂದು ಸರ್ಕ್ಯುಲರ್ ಹೊರಡಿಸಿದೆ. ಒಂದು ತಡೆಯಾಜ್ಞೆ ಹೊರಡಿಸಿದೆ ಮತ್ತು ಇದಕ್ಕೆ ಸರಕಾರ ಕೊಟ್ಟ ಕಾರಣ ಏನೆಂದರೆ ಈ ವಿಚಾರ ಕೇಂದ್ರ ಸರಕಾರದ ವಶಂದೆ ಇದೆ, ನಾವು ಕಳುಹಿಸಿದ್ದೇವೆ ಸರ್ಕ್ಯುಲರ್‌ನಲ್ಲಿ ಏನೇನು ಜಾತಿಗಳನ್ನು ಸೇರಿಸಿದ್ದೇವೆ, ಆ ಜಾತಿಗಳನ್ನು ಎಸ್.ಸಿ. ಎಸ್.ಟಿ.ಗೆ ಸೇರಿಸುವುದಕ್ಕೆ ಅನುಮತಿ ಬರ ಬಹುದು, ಆದಂ ಆಗಬಹುದು, ಆದುದರಿಂದ ಅಲ್ಲಿಯಂವರೆಗೆ ಇವರಿಗೆ ಒಂದು ರಕ್ಷಣೆ ಕೊಟ್ಟುಬಿಡೋಣ ಎಂಬ ವಾದವನ್ನು ನಮ್ಮ ವಂಂದಿಟ್ಟಿದ್ದಾರೆ. ಇದನ್ನು ಏತಕ್ಕೆ ಮುಂದಿಟ್ಟುಬಿಟ್ಟಿದ್ದಾರೆ ಎಂದರೆ ಇದು ಬಹಳ ಮೊಂಡುವಾದ.

ಅಧ್ಯಕ್ಷರು.—ಇದನ್ನೆಲ್ಲಾ ಈಗ ಏತಕ್ಕೆ ತಾವು ಹೇಳುವುದು, ಸರಕಾರ ಏನು ಮಾಡಬೇಕು ಅದನ್ನು ಹೇಳಿಬಿಡಿ.

ಶ್ರೀ ಆರ್. ಎನ್. ನಾಯಕ್.—ನಿಮಗೆ ಏತಕ್ಕೆ ಅಷ್ಟು ನೋವಾಗುತ್ತದೆ.

ಅಧ್ಯಕ್ಷರು.—ನಿಮಗೆ ನೋವಾಗಿದ್ದರೆ ನನಗೂ ನೋವಾದ ಹಾಗೆ. ಇಲ್ಲಿ ರಾಜಕೀಯ ಭಾಷಣ ಮಾಡಬೇಡಿ. ಖಾರ್ಗೆಯವರು, ಬಸವಲಿಂಗಪ್ಪನವರು ಎಷ್ಟು ಚೆನ್ನಾಗಿ ಹೇಳಿದರಂ ನೋಡಿ.

ಶ್ರೀ ಆರ್. ಎನ್. ನಾಯಕ್.—ಅವರು ಅಷ್ಟು ಚೆನ್ನಾಗಿ ಹೇಳಿದರು ಎಂದರೆ ಅವರಿಗೆ ಅಷ್ಟು ಅನುಭವ ಇದೆ, ಅಷ್ಟು ಅನುಭವ ನನಗೂ ಬಂದರೆ ನಾನೂ ಸಹ ಚೆನ್ನಾಗಿ ಹೇಳಬಲ್ಲೆನೆ. ತಾವು ಮಧ್ಯೆ ಮಧ್ಯೆ ಮಾತನಾಡದೇ ಇದ್ದರೆ ನನಗೆ ಬಹಳ ಸಂತೋಷವಾಗುತ್ತದೆ. ಆದರೆ ಏನು ಮಾಡುವುದು ?

ಶ್ರೀ-೩೦ ಪಿ.ಎಂ.

ಇನ್ನೊಂದು ವಿಚಾರ ಹೇಳುತ್ತೇನೆ. ಈಗ ಉಳಿದ ಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿಸುವುದಕ್ಕೆ ಸಾಧ್ಯತೆ ಇದೆ. ಈಗ ಇವರಿಗೆ ಇರತಕ್ಕಂಥಾದ್ದು ೧೮ ಪರ್ಸೆಂಟ್ ಮೀಸಲಾತಿ ಮಾತ್ರ ಈ ೧೮ ಪರ್ಸೆಂಟ್ ಮೀಸಲಾತಿ ಈಗ ಒಂದು ನಿರ್ದಿಷ್ಟ ಜಾತಿಗಳಿಗೆ ಮಾತ್ರ ಸೇರಿದೆ. ಉಳಿದ ನಾಯಕ ನಾಯಕ್ ಇನ್ನಿತರೆ ಜಾತಿಗಳನ್ನು ಸೇರಿಸಿದಾಗ ಪರ್ಸೆಂಟೇಜ್ ಜಾಸ್ತಿ ಮಾಡುತ್ತೀರಾ ಹೇಗೆ? ಇದಕ್ಕೆ ನೀವು ಉತ್ತರ ಕೊಡಬೇಕು: ಜಾಸ್ತಿ ಮಾಡುವುದಕ್ಕೆ ನಿಮಗೆ ಶಕ್ತಿಯಿದೆಯೇ. ಇದನ್ನು ಕೇಂದ್ರ ಸರ್ಕಾರ ಮಾಡಬೇಕು. ನೀವು ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ ಈಗ ಇರತಕ್ಕ ೧೮ ಪರ್ಸೆಂಟ್ ಮೀಸಲಾತಿಯನ್ನು ೨೦-೨೫ ಪರ್ಸೆಂಟ್ ಮಾಡಬೇಕಾದರೆ ರಾಜ್ಯಾಂಗದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ ಇಲ್ಲದಿದ್ದರೆ ಅದು ಅಪರಾಧವಾಗುತ್ತದೆ. ಆ ಪ್ರಯತ್ನ ಆಗುವುದಿಲ್ಲ. ಈಗ ನಾಯಕ ಜನಾಂಗದಲ್ಲಿ ಯಾರ್ಯಾರು ಇದ್ದಾರೋ ಅವರಿಗೆ ಬೇಜಾರಾಗುತ್ತದೆಂದು ಹೇಳಿ ಕಂಟಿನ್ಯೂ ಮಾಡುತ್ತಿದ್ದರೆ ಮಾಡಿ. ಹೋಗಲಿ ಬ್ರಾಹ್ಮಣರು ಇತರೆ ಜಾತಿಯವರು ಸುಳ್ಳು ಸರ್ಟಿಫಿಕೇಟ್ ತೆಗೆದು ಕೊಂಡು ನೌಕರಿಯಲ್ಲಿದ್ದಾರಲ್ಲ, ಇಂತಹವರ ಮೇಲೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ? ಸರ್ಟಿಫಿಕೇಟ್ ಕೊಟ್ಟ ತಹಶೀಲ್ದಾರರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಯಾರ್ಯಾರು ಇಂತಹ ಸರ್ಟಿಫಿಕೇಟ್ ಕೊಟ್ಟಿದ್ದಾರೋ ಅವರನ್ನೆಲ್ಲಾ ಸೇರಿಸಿ ಒಂದು ಪಟ್ಟಿ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದು ಸಸ್‌ಪೆಂಡ್ ಮಾಡುತ್ತೀರಾ ? ಹೇಗೆ ? ಹೀಗೆ ಮಾಡಿದರೆ ತಪ್ಪು ಮಾಡುವವರಿಗೆ

ಬುದ್ಧಿ ಬರುತ್ತದೆ ನಿಮ್ಮ ಉದ್ದೇಶ ಆದಲ್ಲ. ನಿಮ್ಮ ಉದ್ದೇಶದಲ್ಲಿ ದುರುದ್ದೇಶವಿದೆ, ಈಗ ೧೮ ಪರ್ಸೆಂಟ್ ವಿೂಸಲಾತಿ ಇದೆ. ಇದರ ಜೊತೆಗೆ ಇನ್ನು ಒಂದು ೧೦-೨೦ ಲಕ್ಷ ಜನರನ್ನು ಸೇರಿಸಿ ಈ ೧೮ ಪರ್ಸೆಂಟ್‌ನಲ್ಲಿ ಈ ಜನರಿಗೆ ವಿೂಸಲಾತಿ ಸಿಕ್ಕಿದ್ದರೆ ಆಗ ಮೇಲ ರ್ಗದವರಿಗೆ ಲಾಭವಾಗುತ್ತದೆ. ಇವರ ಸಂಖ್ಯೆ ಕಡಿಮೆಯಾದರೆ ವಿೂಸಲಾತಿ ಮೇಲ್ವರ್ಗದ ಜನರಿಗೆ ಸಿಗುತ್ತದೆ. ಆದ್ದರಿಂದ ಇವರೆಲ್ಲವನ್ನು ವಿೂಸಲಾತಿ ಗುಂಪಿಗೆ ಸೇರಿಸಲು ಹೊರಟ್ಟಿದ್ದೀರಿ ಶ್ರೀವಾನ್ ಬಸವಲಿಂಗಪ್ಪನವರ ಕಾಲದಲ್ಲಿ ಒಂದು ಆದೇಶವನ್ನು ಹೊರಡಿಸಿದರು, ಅದೇನೆಂದರೆ ಹರಿಜನ ವಂತ್ತು ಗಿರಿಜನರು ಯಾರೂ ತಲೆಯ ಮೇಲೆ ಮಲ ಹೊರಬಾರದೆಂದೂ ಈಗ ಆ ಆಜ್ಞೆಯ ಪ್ರಕಾರ ಯಾರೂ ಮಲ ಹೊರುವುದಿಲ್ಲ. ಇದು ಇತಿ ಹಾಸದಲ್ಲಿ ಉಳಿಯುತ್ತದೆ. ಆದ್ದರಿಂದ ನಿಮ್ಮದು ಒಂದು ಹೆಸರು ಬರಲಿ. ಮತ್ತೆ ಸುಳ್ಳು ಸರ್ಟಿ ಫಿಕೇಟ್ಸ್ ಕೊಟ್ಟ ತಹಶೀಲ್ದಾರರುಗಳಿಗೆ ಪ್ರಮೋಷನ್ ಕೊಡುತ್ತೀರಾ ಹೇಗೆ ? ಇಲ್ಲದಿದ್ದರೆ ನಾನೊಂದು ಶಿಕ್ಷೆ ಸಲಹೆ ಮಾಡುತ್ತೇನೆ ಅದನ್ನು ಮಾಡಿ. ಏನೆಂದರೆ ಯಾರ್ಯಾರು ತಹಶೀಲ್ದಾರ್ಸ್ ಇಂತಹ ಸುಳ್ಳು ಸರ್ಟಿಫಿಕೇಟ್ಸ್ ಕೊಟ್ಟಿದ್ದಾರೋ, ಅವರೆಲ್ಲರನ್ನು ಕೆಲಸದಿಂದ ಕಿತ್ತು ಹಾಕಿ ನಂತರ ಅವರುಗಳು ಸಣ್ಣ ಸಣ್ಣ ಅಂಗಡಿಗಳನ್ನು ಇಟ್ಟುಕೊಟ್ಟು ಚಪ್ಪಲಿ ಹೊಲಿಯಲಿ. ಅವರಿಗೆ ೧೮ ಪರ್ಸೆಂಟ್‌ನಲ್ಲಿ ವಿೂಸಲಾತಿ ಬೇಕು ಈ ಕೆಲಸದಲ್ಲಿ ವಿೂಸಲಾತಿ ಬೇಡವೇ ? ದುರಾದೃಷ್ಟ ವಶಾತ್ ಅವರಿಗೆ ಲಕ್ ಚೆನ್ನಾಗಿದೆ.

ಶ್ರೀ ವೀರಣ್ಣ.—ವಾನ್ಯ ಅಧ್ಯಕ್ಷರೇ ತಹಶೀಲ್ದಾರರು ಚಪ್ಪಲಿ ಹೊಲಿಯಲಿ ಎನ್ನತಕ್ಕಂಥಾದ್ದು ಅನ್ ಪಾರ್ಲಿಮೆಂಟರಿ, ಅದು ರೆಕಾರ್ಡ್‌ಗೆ ಹೊಗುವುದು ಬೇಡ.

ಶ್ರೀ ಆರ್. ಎನ್. ನಾಯಕ್.—ಹೋಗಲಿ ಪಾದರಕ್ಷೆ ಹೊಲಿಯಲಿ ಎಂದು ಹೇಳಲೇ ?

ಅಧ್ಯಕ್ಷರು.—ನಾನು ಅದನ್ನು ನೋಡುತ್ತೇನೆ.

ಶ್ರೀ ಆರ್, ಎನ್. ನಾಯಕ್ —ವಾನ್ಯ ಅಧ್ಯಕ್ಷರೇ, ಏತಕ್ಕೆ ಹೊಲಿಯಬಾರದು ? ಯಜ ವಾನರ ಚಪ್ಪಲಿ ಕಿತ್ತು ಹೋಗಿದ್ದರೆ ಅದನ್ನು ಹೊಲಿಯುವುದಕ್ಕೆ ಆಗುವುದಿಲ್ಲವೇ? ಮತ್ತೆ ಇನ್ನೊಂದು ವಾತು ಹೇಳುತ್ತೇನೆ, ತಾವೊಂದು ಸ್ಪೆಷಲ್ ಪ್ರಾವಿಜನ್ ಮಾಡಿ, ಏನೆಂದರೆ ಈ ಸುಳ್ಳು ಸರ್ಟಿಫಿಕೇಟ್ಸ್ ಕೊಟ್ಟ ತಹಶೀಲ್ದಾರರು ತಲೆಯ ವೇಲೆ ಸ್ವಲ್ಪ ಮಲ ಹೊರಲಿ. ಏತಕ್ಕೆ ಆಗುವುದಿಲ್ಲ ಅದನ್ನು ತಾವು ಮಾಡಿಸಬೇಕು.

ಅಧ್ಯಕ್ಷರು.—ನಾಯಕರೇ, ತವಂಗೇನು ಆಗಬೇಕು ಅದು ಕೇಳಿ.

ವಾನ್ಯ ಮುಖ್ಯ ವಂತ್ರಿಯವರು ಒಂದು ಸಾರಿ ಹರಿಜನರಿಗೆ ಯಾರು ಮಲ ತಿನ್ನಿಸುತ್ತಾರೋ ಅಂಥವರಿಗೆ ಮಲ ತಿನ್ನಿಸುತ್ತೇವೆಂದು ಇಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಅದೆಲ್ಲಾ ಸರಿಯಲ್ಲ. ಬೇರೆ ತರಹ ವಾತನಾಡಿ.

ಆರ್. ಎನ್. ನಾಯಕ್.—ನಾನು ಹೇಳಿರುವುದು ಸರಿಯಲ್ಲವೆಂದರೆ ಮುಖ್ಯ ವಂತ್ರಿಯವರು ಹೇಳಿರುವುದು ಸರಿಯೇ? ನಾನು ಹೇಳಿರುವ ಎರಡು ಶಿಕ್ಷೆಯಲ್ಲಿ ಯಾವುದನ್ನು ಈ ತಹಶೀಲ್ದಾರುಗಳಿಗೆ ಕೊಡುವುದಕ್ಕೆ ಸಾಧ್ಯತೆ ಇದೆ ಎಂಬುದನ್ನು ನೋಡಿರಿ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಖಿರ್ಗೆಯವರು ಹೇಳಿದ ಹಾಗೆ ವಾನ್ಯ ವಿ. ಎಲ್. ಪಾಟೀಲರ ನೇತೃತ್ವದಲ್ಲಿ ಒಂದು ಕವಿಟಿಯನ್ನು ರಚನೆ ವಾಡಲಾಗಿತ್ತು ಆದರೆ ಈಗ ನನ್ನ ಅಧ್ಯಕ್ಷತೆಯಲ್ಲಿ That Committee is to be re-constituted now. ಈ ಕವಿಟಿ ಫಾರ್ವ ಆದ ವೇಲೆ ವಿಾಟಿಂಗ್‌ನ್ನು ಕರೆಯುತ್ತೇನೆ. ವಾನ್ಯ ಬಸವಲಿಂಗಪ್ಪನವರು ರಾಷ್ಟ್ರಾಧ್ಯಕ್ಷರು ವಾಡಿದ ಲಿಸ್ಟೇ That is final list. I too agree for that ಇವರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಕಾಂಪ್ರಹೆನ್ಸೀವ್ ಬಿಲ್ ಬರುತ್ತದೆ. Some particular castes nnd tribes to be included and to be excluded and we have recemmended to them on that basis. We have no power. ಅಷ್ಟೇ ಹೊರತು ಬೇರೆ ಏನೂ ಇಲ್ಲ. ಕೇಂದ್ರ ಸರ್ಕಾರವೇ ಲಿಸ್ಟ್‌ನ್ನು ವಾಡುವುದು.

ಶ್ರೀ ಬಸವಲಿಂಗಪ್ಪ.—ಕೇಂದ್ರ ಸರ್ಕಾರ ವಾಡಿದ ಶಿಫಾರಸ್‌ಗೆ ನೀವು ಸರಿಯಾದ ಗವನವನ್ನೇ ಕೊಡುವುದಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಹಾಗೇನಿಲ್ಲ. ಆಮೇಲೆ, ೧೮ ಪರ್‌ಸೆಂಟ್ ರಿಸರ್ವೇಷನ್‌ನ್ನು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡುವ ಬಗ್ಗೆ, ಹಾಗೂ ಅವರ ರಕ್ಷಣೆ ಬಗ್ಗೆ ಮಾನ್ಯ ಖರ್ಗೆಯವರು, ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ಆರ್. ಎನ್. ನಾಯ್ಕರವರು ಮಾತನಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರ ಮೇಲೆ ಏನಾದರು ದೌರ್ಜನ್ಯ ನಡೆದರೆ ಅಥವಾ ಆ ಜಾತಿಯವರ ಮೇಲೆ ದಬ್ಬಾಳಿಕೆ ಮಾಡಿದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಮಸೂದೆಯನ್ನೇ ತರುತ್ತಿದ್ದೇವೆ. ಈ ಮಸೂದೆಗೆ ತಾವೆಲ್ಲರೂ ಒಪ್ಪಿಗೆಯನ್ನು ಕೊಡಬೇಕು.

SRI M. MALLIKARJUNA KHARGE.—Now you have to enhance 18% because after the restrication removal the population increased and half of the population of the North Karnataka joined with this list i. e., new list.

ಶ್ರೀ ಜಿ. ಬಸವಣ್ಣಪ್ಪ.—ಪರಿಶಿಷ್ಟ ಜಾತಿ ಮತ್ತು ವರ್ಗದ ಜನರುಗಳಿಗೆ ಯಾವ ರೀತಿ ಶಾಲಾ ಕಾಲೇಜುಗಳಲ್ಲಿ ೧೮ ಪರ್‌ಸೆಂಟ್ ರಿಸರ್ವೇಷನ್ ಇದೆಯೋ ಅದೇ ರೀತಿ ನೌಕರಿಯಲ್ಲೂ ಇರುವುದು ಎಲ್ಲರಿಗೂ ಗೊತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರೆಂದು ಹೇಳಿಕೊಂಡು ಇತರೆ ಜಾತಿಯವರು ಸಹ ಸರ್ಕಾರದ ನೌಕರಿಗಳಿಗೆ ಸೇರುತ್ತಿರುವ ಉದಾಹರಣೆಗಳು ಇರುವುದರಿಂದ ಇನ್ನು ಮುಂದೆ ಯಾರಾದರು ಇಂಥ ಅಪರಾಧಗಳನ್ನು ಮಾಡಿದರೆ ಅಂಥವರ ಮೇಲೆ ೧ ಸಾವಿರ ರೂಪಾಯಿಗಳ ದಂಡ ಹಾಗೂ ೬ ತಿಂಗಳು ಕಠಿಣ ಸಜೆಯನ್ನು ವಿಧಿಸತಕ್ಕ ಒಂದು ಮಸೂದೆಯನ್ನು ತರುತ್ತಿದ್ದೇವೆ. ಈ ಮಸೂದೆಯು ಸಚಿವ ಸಂಪುಟದ ಸಭೆಯ ಮುಂದೆ ಬಂದಿತ್ತು. ಸಚಿವ ಸಂಪುಟವೂ ಸಹ ಇದನ್ನು ಒಪ್ಪಿಕೊಂಡಿದೆ. ಸದ್ಯದಲ್ಲೆ ಈ ಮನೆಯಲ್ಲಿ ಮಸೂದೆಯನ್ನು ಮಂಡಿಸಲಾಗುತ್ತದೆ. ತಾವುಗಳೆಲ್ಲರೂ ಆ ಮಸೂದೆಯನ್ನು ಪಾಸ್ ಮಾಡಿದರೆ ಅದೇ ಶಾಸನವಾಗುತ್ತದೆ. ಅದು ಶಾಸನವಾದರೆ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರುಗಳಿಗೆ ರಕ್ಷಣೆ ದೊರುಕುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಆಮೇಲೆ ಎರಡನೆಯದಾಗಿ ಎಸ್. ಸಿ. ಪಾಪ್ಯುಲೇಷನ್ ಜಾಸ್ತಿ ಇರುವುದರಿಂದ ಅವರ ಸಂಖ್ಯೆಗೆ ಅನುಗುಣವಾಗಿ ರಿಸರ್ವೇಷನ್ ಇಡಬೇಕೆಂದು ಹೈ ಲೆವಲ್‌ನಲ್ಲಿ ಮಾತುಕತೆಯಾಗುತ್ತಿದೆ. ಆದಷ್ಟು ಬೇಗ ಅದು ತೀರ್ಮಾನವಾಗಿ ಜಾರಿಗೆ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಮಾತನಾಡುತ್ತಾ ಇದರ ಬಗ್ಗೆ ಒಂದು ಬಿಲ್‌ನ್ನು ತರುತ್ತಿದ್ದೇವೆಂದು ಹೇಳಿದ್ದೀರಿ. ಆ ಬಿಲ್‌ಗೆ ಸಲಹೆಗಳೇನಾದರು ಬೇಕಾದರೆ ಅಥವಾ ನಮ್ಮ ಅಭಿಪ್ರಾಯಗಳೇನಾದರು ಬೇಕಾದರೆ ಆ ಬಿಲ್‌ನ್ನು ತರುವುದಕ್ಕಿಂತ ಪೂರ್ವದಲ್ಲೇ ತಾವು ಕೆಲವು ಜನರುಗಳನ್ನು ಕರೆದು ಅವರ ಜೊತೆ ಮಾತನಾಡಿ ಸಲಹೆಗಳನ್ನು ಪಡೆಯಿರಿ. ತರ್ಕವನ್ನು ಮಾಡಿ ಎಲ್ಲರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಳ್ಳಿ. ನೀವು ಯಾರ ಸಲಹೆಯನ್ನೂ ಪಡೆಯದೆ ಬಿಲ್ ತರುವುದು, ಆಮೇಲೆ ನಾವೆಲ್ಲಾ ಅಮೆಂಟ್ ಮೆಂಟ್ ಮಾಡುವುದಕ್ಕೆ ಹೇಳುವುದು, ಬಿಲ್ ಪಾಸ್ ಆಗದೇ ಇರುವುದು ಮುಂತಾದ್ದು ಎಲ್ಲಾ ಆಗುವುದು ಬೇಡ, ಆದ್ದರಿಂದ, ಮೊದಲೇ ಕೆಲವು ಹಿರಿಯರನ್ನು ಕರೆದು ಇದರ ಬಗ್ಗೆ ಮಾತನಾಡಿ ಮಾನ್ಯ ಖರ್ಗೆಯವರು ಇದ್ದಾರೆ, ಇನ್ನೂ ಕೆಲವರು ಇದ್ದಾರೆ. ಅವರ ಜೊತೆಯಲ್ಲಿ ಮಾತನಾಡಿ ಅನಂತರ ಅಧಿಕಾರಿಗಳನ್ನೂ ಕರೆಸಿ ಒಂದು ರೂಪಕ್ಕೆ ಬಿಲ್‌ನ್ನು ತಂದು ಆದಷ್ಟು ಬೇಗ ಶಾಸನವನ್ನು ಮಾಡಿ. ಈ ಕೆಲಸವನ್ನು ಆದಷ್ಟು ಬೇಗ ಮಾಡಿ.

ಶ್ರೀ ಗೋಪಾಲ ಮಯ್ಯಂದ ಕಾಸಡೆ.— ಸಳ್ಳು ಜಾತಿ ಸರ್ಟಿಫಿಕೇಟ್ ಕೊಟ್ಟು ಕೆಲಸಕ್ಕೆ ಸೇರಿಕೊಂಡಿರುವ ಕರುಬ, ಮಲೇರು ಈ ಜನಾಂಗದವರನ್ನು ಬಿಟ್ಟು ಬಿಟ್ಟು ಒಕ್ಕಲಿಗ, ಬ್ರಾಹ್ಮಣರು ಇದ್ದಾರಲ್ಲ, ಇವರುಗಳನ್ನು ಕೆಲಸದಿಂದ ಡಿಸ್‌ಮಿಸ್ ಮಾಡುವುದಕ್ಕೆ ಏನು ಕ್ರಮವನ್ನು ಹಾಕಿಕೊಂಡಿದ್ದೀರಿ ? ಎರಡನೆಯದಾಗಿ, ಆ ನಾಲ್ಕು ಮಂದಿ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಮತ್ತು ಅವರ ಹೆಸರುಗಳನ್ನು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಅಧ್ಯಕ್ಷರೆ, ಆ ನಾಲ್ಕು ಮಂದಿ ಅಧಿಕಾರಿಯವರ ಹೆಸರು ಈ ರೀತಿಯಲ್ಲಿ ಇದೆ, (೧) ಶ್ರೀ ಕಾಶೀನಾಥ ಮಲ್ಲಾರಿರಾವ್ ಸಂಕನಗೌಡ,—ಇವರು ಜಾತಿಯಲ್ಲಿ ಕೋಳಿ ಜನಾಂಗದವರು, ಗಂಗಾವಂತ್ತರು. ಇವರು ಪರಿಶಿಷ್ಟ ವರ್ಗದವರಿಗೆ ವಿಾಸಲಾಗಿಟ್ಟಿದ್ದ ವೈದ್ಯಾಧಿಕಾರಿ ಹುದೆ

ಯನ್ನು ಪಡೆದು, ಕೋಳಿಡೋರ್ ಎಂದು ಬೋಗಸ್ ಸರ್ಟಿಫಿಕೇಟ್ ಕೊಟ್ಟಿ ಉದ್ಯೋಗವನ್ನು ಪಡೆದಿದ್ದಾರೆ. ಅವರ ಮೇಲೆ ಇಲಾಖಾ ಕ್ರಮ ತೆಗೆದುಕೊಂಡು ಸಸ್ಪೆಂಡ್ ಮಾಡಲಾಗಿದೆ. (೨) ಶ್ರೀ ಎಸ್. ಪುರುಷೋತ್ತಮ ಇವರು ಎಚ್. ಎ. ಎಲ್. ಬೆಂಗಳೂರಿನಲ್ಲಿ ಕೆಲಸಕ್ಕಿದ್ದಾರೆ. ಇವರು ಆಕ್ಕಸಾಲಿಗ ಜನಾಂಗದವರು. ಇವರು ಕಮ್ಮಾರ ಎಂದು ಹೇಳಿ, ಪರಿಶಿಷ್ಟ ಜಾತಿಯವರಿಗೆ ಇದ್ದ ಹುದ್ದೆಯನ್ನು ತೆಗೆದುಕೊಂಡಿರುವುದರಿಂದ ಅವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಲಾಗಿದೆ. (೩) ಶ್ರೀಮತಿ ಕಮಲಾ ಶಂಕರ್-ಭಾರತೀಯ ದೂರವಾಣಿ ಸಂಸ್ಥೆ ಬೆಂಗಳೂರು, ಇಲ್ಲಿ ಕೆಲಸವನ್ನು ದೊರಕಿಸಿ ಕೊಂಡಿದ್ದಾರೆ. ಇವರು ಕುರುಬ ಜನಾಂಗದವರು. ತಾವು ಕಾಡು ಕುರುಬರು ಎಂದು ಸರ್ಟಿಫಿಕೇಟ್ ಕೊಟ್ಟು ನೌಕರಿ ಹೊಂದಿದ್ದಾರೆ. ಇವರಿಗೆ ಈಗ ಹಿಂಬಡ್ತಿ ಕೊಟ್ಟು, ಕ್ರಮೇಣ ಸಸ್ಪೆಂಡ್‌ನಲ್ಲಿ ಇಡುತ್ತಾರೆ. (೪) ಶ್ರೀ ಶ್ರೀನಿವಾಸಯ್ಯ, ಎಚ್. ಎ. ಎಲ್. ಬೆಂಗಳೂರು, ಇವರು ಬೇಡ ಜನಾಂಗದವರು, ನಾಯ್ಕ ಎಂದು ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ನೌಕರಿ ಪಡೆದಿದ್ದಾರೆ. ಇವರ ಮೇಲೆ ಇಲಾಖಾ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಅಧ್ಯಕ್ಷರು.—ಬಸವಣ್ಣೆಪ್ಪನವರೆ, ಈ ಒಂದು ಸಮಿತಿಯನ್ನು ರಚನೆ ಮಾಡಿ ಎರಡು ವರ್ಷ, ಐದು, ತಿಂಗಳುಗಳು ಆಗಿದೆ. ಸರಿಯಾಗಿ ವಿಚಾರಿಂಗ್ ಕರೆದು ಕೆಲಸವನ್ನು ಆ ಸಮಿತಿಯವರು ಮಾಡ ಬೇಕು. ಇಲ್ಲದಿದ್ದರೆ ಏನು ಪ್ರಯೋಜನ ? ಹಾಗೆಯೇ ಸಂವಿಧಾನದ ಮತ್ತು ಇಂಡಿಯನ್ ಪಿನಲ್ ಕೋಡ್ ಪ್ರಕಾರ ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಕೊಡಲಿ ಕಾವು ಕುಲಕ್ಕೆ ಮೃತ್ಯು ಎನ್ನುವ ಒಂದು ಗಾದೆ ಇದೆ. ನೀವು ಕೂಡ ಎಸ್. ಸಿ. ಇರುವು ದರಿಂದ ಅವರಿಗೆ ಮೃತ್ಯು ಆಗಬಾರದು ಬೇಡ. ಸೂಕ್ತ ಕ್ರಮ ತೆಗೆದುಕೊಳ್ಳಿ.

ಸಭೆಯು, ನಾಳೆ ಬೆಳಿಗ್ಗೆ ೧೦ ಘಂಟೆಗೆ ಸಮಾವೇಶಗೊಳ್ಳುತ್ತದೆ,

ಸದನವು ೫-೪೫ಕ್ಕೆ ಮುಂಕ್ತಾಯಗೊಂಡು ಪುನ : ದಿನಾಂಕ ೧-೬-೧೯೮೮ರ ಬುಧವಾರ ಬೆಳಿಗ್ಗೆ ೧೦ ಘಂಟೆಗೆ ಸೇರಲು ನಿರ್ಧರಿಸಿತು.